# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 26-02-2019ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರು,** | | |
| ಎಸ್.ಪಿ. ಹೇಮಲತಾ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಎಂ. ಆನಂದ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಶಾಂತಿನಗರ), |
| ಬಿ.ಎನ್. ನಿತೀಶ್‌ಪುರುಷೋತ್ತಮ | ಸದಸ್ಯರು | ಸಹಾಯಕ ಕಾನೂನು ಅಧಿಕಾರಿ, |
| ಲತ ಕುವರ್ ರಾಥೋಡ್. ಆರ್.ಜೆ | ಸದಸ್ಯರು | ಸಹಾಯಕ ಆಯುಕ್ತರು (ಕಲ್ಯಾಣ), |
| ಬಾಲಕೃಷ್ಣನ್. ಜಿ | ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು |
| ಅಜ್ಮಲ್ ಬೇಗ್ | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಗಾಂಧಿನಗರ), (ಜೆ.ಜೆ.ಆರ್.ನಗರ), |
| ಭಾರತಿ ರಾಮಚಂದ್ರ | ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು, |
| ಮೋಹನ್‌ಕುಮಾರ್ | ಸದಸ್ಯರು | --- |
| ಕೆ. ಸೋಮಶೇಖರ್ | ಸದಸ್ಯರು | --- |
| ಎಲ್. ಶ್ರೀನಿವಾಸ | ಸದಸ್ಯರು | --- |
| ವಿ. ಶಿವಪ್ರಕಾಶ್ | ಸದಸ್ಯರು | --- |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

### *011. ವಿಷಯದ ಸಂಖ್ಯೆಃ ತೆಆಸ್ಥಾಸ/ 116 /2018-19*

***ಪ್ರಧಾನ ಅಭಿಯಂತರರ ದಿನಾಂಕ: 24-12-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಕಾಮಗಾರಿಯಾದ Construction of Anganawadi building and reading room at 4th main road near muneshwara block and special repairs to roilet block at karimariyamma slum in ward No.06ಗೆ ರೂ.25.00 ಲಕ್ಷಗಳ ಮೊತ್ತಕ್ಕೆ Works code No.006-09-N-S-E-B-FO-001/002 ನೀಡಿದ್ದು, ಆಡಳಿತಾತ್ಮಕ ಅನುಮೋದನೆ ಸಂಖ್ಯೆ: 88/08-09, ದಿನಾಂಕ: 13-11-2008 ಮತ್ತು ತಾಂತ್ರಿಕ ಮಂಜೂರಾತಿ ಸಂಖ್ಯೆ: 435/08-09, ದಿ: 27-12-2008 ನೀಡಲಾಗಿದ್ದು, ಕಾರ್ಯಪಾಲಕ ಅಭಿಯಂತರರು (ಗಾಂಧಿನಗರ) ವಿಭಾಗದವರು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಗುತ್ತಿಗೆದಾರರಾದ ಶ್ರೀ. ಕೆ. ಶ್ರೀಧರ್, ಬೆಂಗಳೂರು ರವರಿಗೆ ಕಾರ್ಯಾದೇಶ ಸಂಖ್ಯೆ: 22/09-10, ದಿ: 22-08-2009 ರಂದು ನೀಡಿದ್ದು, ತದನಂತರ ಕಾಮಗಾರಿಯು ಪೂರ್ಣಗೊಂಡಿರುವುದಕ್ಕೆ ವಲಯದ ಕಾರ್ಯಪಾಲಕ ಅಭಿಯಂತರರು (ಗಾಂಧಿನಗರ) ರವರು ಮುಖ್ಯ ಅಭಿಯಂತರರು (ಪಶ್ಚಿಮ) ಮತ್ತು ಜಂಟಿ ಆಯುಕ್ತರು (ಪಶ್ಚಿಮ) ರವರು ಕಂಡಿಕೆ (108) ರಿಂದ (111)ರ ವರೆಗೆ ವಿವರಿಸಿದ್ದು, ಅಂತಿಮವಾಗಿ ಲೆಕ್ಕಶೀರ್ಷಿಕೆ ಅಡಿ 2012-13ನೇ ಸಾಲಿನಲ್ಲಿ ರೂ.25.00 ಲಲಕ್ಷಗಳ ಮೊತ್ತಕ್ಕೆ ಪುನರ್ ನವೀಕರಿಸಲು ವಲಯದಲ್ಲಿ ತೀರ್ಮಾನಿಸಿದ್ದು, ಮುಖ್ಯ ಅಭಿಯಂತರರು (ಪಶ್ಚಿಮ) ರವರು ಕಂಡಿಕೆ (169) ರಲ್ಲಿ ಡೀ-ಫ್ರೀಜ್ ಮಾಡಲು ಕೋರಿರುತ್ತಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮುಖ್ಯ ಅಭಿಯಂತರರು (ಟಿವಿಸಿಸಿ) ಕಂಡಿಕೆ (180) ರಲ್ಲಿ ಮುಖ್ಯ ಅಭಿಯಂತರರು (ಪಶ್ಚಿಮ) ರವರು ಸಲ್ಲಿಸಿರುವ ಸಮಜಾಯಿಷಿಯನ್ನು ಪರಿಗಣಿಸಬಹುದೆಂದು ವರದಿ ಮಂಡಿಸಿದ್ದು, ತದನಂತರ ಮುಖ್ಯ ಆರ್ಥಿಕ ಅಧಿಕಾರಿ ರವರು ಕಂಡಿಕೆ*

*(190)ರಲ್ಲಿ 2018-19ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗೆ ಲೆಕ್ಕಶೀರ್ಷಿಕೆ ಪಿ2050ರ ಅಡಿಯಲ್ಲಿ ಅನುದಾನ ಮೀಸಲಿರಿಸಿರುವುದಿಲ್ಲ ಮತ್ತು ಲೆಕ್ಕಶೀರ್ಷಿಕೆ ಪಿ2650ರ ಅಡಿಯಲ್ಲಿ ರೂ.19.50 ಲಕ್ಷಗಳ ಅನುದಾನ ಅಳವಡಿಸಿಕೊಂಡು Revalidation Job Number ನೀಡಲು ವರದಿ ಸಲ್ಲಿಸಿರುತ್ತಾರೆ.*

*ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ಕಾಮಗಾರಿಯಾದ Construction of Anganawadi building and reading room at 4th main road near muneshwara block and special repairs to roilet block at karimariyamma slum in ward No.06ಗೆ ಮರು ಹೊಂದಾಣಿಕೆಯ ಅನುಮೋದನೆ ನೀಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.*

***ನಿರ್ಣಯ: ವಾರ್ಡಿನ ಸದಸ್ಯರು ಪತ್ರವನ್ನು ನೀಡಿ ಕಾಮಗಾರಿಯು ಕಾಮಗಾರಿ ಸಂಕೇತವನ್ನು ಪಡೆಯುವಾಗ ಹಳೆ ವಾರ್ಡ್-06ರ ವ್ಯಾಪ್ತಿಗೆ ಬರುತ್ತಿದ್ದು ವಾರ್ಡ್ ವಿಂಗಡಣೆಯಾದ ಮೇಲೆ ವಾರ್ಡ್-77 ಆಗಿರುತ್ತದೆ. ಆದುದರಿಂದ ಸದರಿ ಕಾಮಗಾರಿಯನ್ನು ವಾರ್ಡ್-77 ಎಂದು ನಿರ್ಣಯಿಸಿಕೊಡಲು ಕೋರಿಕೊಂಡಿರುತ್ತಾರೆ. ಆದುದರಿಂದ ಸದರಿ ಪ್ರಸ್ತಾವನೆಯನ್ನು ವಾರ್ಡ್-77ರ ಕಾಮಗಾರಿಯೆಂದು ಪರಿಗಣಿಸಬಹುದೆಂದು ಸಮಿತಿಯು ತೀರ್ಮಾನಿಸಿತು.***

## *021. ವಿಷಯದ ಸಂಖ್ಯೆ: ತೆಆಸ್ಥಾಸ/ 146 /2018-19*

***ಪ್ರಧಾನ ಅಭಿಯಂತರರ ದಿನಾಂಕ: 31-01-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯ ಅಭಿಯಂತರರು (ಪಶ್ಚಿಮ) ರವರು ಕಂಡಿಕೆ (48) ರಲ್ಲಿ ವಾರ್ಡ್ ಸಂಖ್ಯೆ:67 ರಲ್ಲಿ ಹೊಸದಾಗಿ ನಿರ್ಮಿಸಿರುವ ಕಟ್ಟಡವಾದ ಡಾ॥ರಾಜ್ ಕುಮಾರ್ ಒಳಾಂಗಣ ಕ್ರೀಡಾಂಗಣಕ್ಕೆ ಸಾರ್ವಜನಿಕರಿಗೆ ಮತ್ತು ಇನ್ನಿತೆರೆ ಸಂಸ್ಥೆಗಳಿಗೆ ಸೌಕರ್ಯಗಳಾದ (1) ನೆಲಮಹಡಿ ಮತ್ತು ಬಾಲ್ಕನ್ನಿಯಲ್ಲಿ ವಿಶಾಲವಾದ ಸಭಾಂಗಣದಲ್ಲಿ ಸುಮಾರು 400 ಆಸನಗಳುಳ್ಳ ಹವಾನಿಯಂತ್ರಣ ವ್ಯವಸ್ಥೆಗೆ (2) ಕಟ್ಟಡದ ಮುಂಭಾಗ ಲಾಬಿ ಮತ್ತು ಪೋರ್ಟಿಕೋ ಇರುತ್ತದೆ. (3) ಕಟ್ಟಡದ ಒಳಾಂಗಣದಲ್ಲಿ ನವೀನ ರೀತಿಯ ಸ್ಟೇಜ್-ಲೈಟಿಂಗ್ಸ್, ಅಕೋಸ್ಟಿಕ್ಸ್, ಸ್ವಿಚ್ಚಸ್ಸ್ ವ್ಯವಸ್ಥೆಗೆ (4) ತಡೆರಹಿತ 24 ಘಂಟೆಗಳ ವಿದ್ಯುತ್ ಸರಬರಾಜು ವ್ಯವಸ್ಥೆಗೆ, (5) ಜನ ಸಂಚಾರಕ್ಕೆ ಕಟ್ಟಡದ ಒಳಗಡೆ ಮತ್ತು ಹೊರ ಭಾಗಗಳಲ್ಲಿ ವಿಶಾಲವಾದ ಪ್ಯಾಸೇಜ್ ವ್ಯವಸ್ಥೆಗೆ (6) ಮಹಿಳೆಯರಿಗೆ ಮತ್ತು ಗಂಡಸರಿಗೆ ಪ್ರತ್ಯೇಕವಾಗಿ ಶೌಚಾಲಯಗಳ ವ್ಯವಸ್ಥೆಗೆ (7) ಕುಡಿಯುವ ನೀರಿನ ಸೌಲಭ್ಯಗಳಿಗೆ (8) ದ್ವಿಚಕ್ರ, ತ್ರಿಚಕ್ರ ಮತ್ತು ನಾಲ್ಕು ಚಕ್ರಗಳ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆಗೆ ಮತ್ತು (9) ಇನ್ನಿತೆರೆ ಸೌಲಭ್ಯಗಳು ಸೇರಿದಂತೆ ಒಂದು ದಿನದ ಬಾಡಿಗೆ ದರವನ್ನು ನಿಗಧಿಪಡಿಸಲು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯಪಾಲಕ ಅಭಿಯಂತರರು, ನಂ-1, ಕಟ್ಟಡಗಳ ವಿಭಾಗ, ಬೆಂಗಳೂರು ರವರಿಂದ ಪತ್ರ ಸಂಖ್ಯೆ:834/18-19, ದಿ: 03-09-2018 ರಂದು ಪಡೆದಿದ್ದು ಮತ್ತು ಸದರಿ ಪತ್ರದ ಪ್ರಕಾರ ವಾರ್ಡ್ ಸಂಖ್ಯೆ:67 ರಲ್ಲಿ ಹೊಸದಾಗಿ ನಿರ್ಮಿಸಿರುವ ಸದರಿ ಕಟ್ಟಡಕ್ಕೆ ರೂ.83587.00 ಗಳಿಗೆ ನಿಗಧಿಪಡಿಸಿರುತ್ತಾರೆ (ಪ್ರತಿಯನ್ನು ಕಡತಕ್ಕೆ ಮಾಹಿತಿಗಾಗಿ ಲಗತ್ತಿಸಿದೆ) ಮತ್ತು ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಇನ್ನಿತರೆ ಹಾಲಿ ಇರುವ ಕಟ್ಟಡಗಳಿಗೆ ಎಂ.ಪಿ.ಇ.ಡಿ. ಶಾಖೆಯಿಂದ ದರಗಳನ್ನು ಪಡೆದಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ:-*

| | | |
|---|---|---|
| *(1) ಜ್ಞಾನಜ್ಯೋತಿ ಸಭಾಂಗಣ* | *ರೂ. 1,13,050.00 +* | *(ನಿಗಧಿತ ಶುಲ್ಕಗಳು ಹೊರತು ಪಡಿಸಿ)* |
| *(2) ಡಾ॥ಬಿ.ಆರ್.ಅಂಬೇಡ್ಕರ್ ಸಭಾಂಗಣ* | *ರೂ. 1,24,000.00 +* | *(ನಿಗಧಿತ ಶುಲ್ಕಗಳು ಹೊರತು ಪಡಿಸಿ)* |
| *(3) ಚೌಡಯ್ಯ ಮೆಮೊರಿಯಲ್ ಹಾಲ್* | *ರೂ. 80,000.00 +* | *(ನಿಗಧಿತ ಶುಲ್ಕಗಳು ಹೊರತು ಪಡಿಸಿ)* |
| *(4) ನವೀಕೃತ ಪುರಭವನ* | *ರೂ. 88,500.00 +* | *(ನಿಗಧಿತ ಶುಲ್ಕಗಳು ಹೊರತು ಪಡಿಸಿ)* |

***ಮತ್ತು ವಾರ್ಡ್ ಸಂಖ್ಯೆ:67 ರಲ್ಲಿ ಹೊಸದಾಗಿ ನಿರ್ಮಿಸಿರುವ ಕಟ್ಟಡಕ್ಕೆ ದರ ನಿಗಧಿಪಡಿಸಲು ವರದಿ ಸಲ್ಲಿಸಿರುತ್ತಾರೆ.***

*ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ವಾರ್ಡ್ ಸಂಖ್ಯೆ:67 ರಲ್ಲಿ ಹೊಸದಾಗಿ ನಿರ್ಮಿಸಿರುವ ಕಟ್ಟಡವಾದ ಡಾ॥ರಾಜ್ ಕುಮಾರ್ ಒಳಾಂಗಣ ಕ್ರೀಡಾಂಗಣ ಕ್ಕೆ ಒಂದು ದಿನಕ್ಕೆ ಬಾಡಿಗೆ ದರ ರೂ.83587.00 (ನಿಗಧಿತ ಶುಲ್ಕಗಳು ಹೊರತು ಪಡಿಸಿ) (ರೂ.ಎಂಭತ್ತು ಮೂರು ಸಾವಿರ ಐನೂರ ಎಂಭತ್ತೇಳು ಮಾತ್ರ) ಅನ್ನು ನಿಗಧಿ ಪಡಿಸಲು ಅನುಮೋದನೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.*

***ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 31-01-2019ರ ಟಿಪ್ಪಣಿಯ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿ, ಸಾರ್ವಜನಿಕ ಹಿತದೃಷ್ಟಿಯಿಂದ ಒಂದು ದಿನಕ್ಕೆ ಬಾಡಿಗೆ ದರ ರೂ.30,000/- (ಮೂವತ್ತು ಸಾವಿರ) (ನಿಗಧಿತ ಶುಲ್ಕಗಳು ಹೊರತು ಪಡಿಸಿ) ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## *031. ವಿಷಯದ ಸಂಖ್ಯೆ: ತೆಆಸ್ಥಾಸ/ 168 /2018-19*

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ವಕೀಲರ ಸಂಘ, ಬೆಂಗಳೂರು (ರಿ.), ವಕೀಲರ ಭವನ, ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯದ ಆವರಣ, ಕಾವೇರಿ ಭವನದ ಹಿಂಭಾಗ, ಕೆ.ಜಿ.ರಸ್ತೆ, ಬೆಂಗಳೂರು-560069 ರವರು 2018-19ನೇ ಸಾಲಿಗೆ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ.200.00 (ಎರಡು ನೂರು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯದ ಪುಟಸಂಖ್ಯೆ-36 ಕೌನ್ಸಿಲ್-1ರ ಪಿಕೋಡ್ 3369 ರಲ್ಲಿ ಮೊತ್ತ ರೂ. 200.00 (ಎರಡು ನೂರು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.*

*ಈ ಸಂಬಂಧವಾಗಿ ವಕೀಲರ ಸಂಘ, ಬೆಂಗಳೂರು (ರಿ.) 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ 200.00 (ಎರಡು ನೂರು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## 04]. ವಿಷಯದ ಸಂಖ್ಯೆ: ತೆಆಸ್ಥಾಸ/ 169 /2018-19

**ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಶ್ರೀ ರಾಮಾಂಜನೇಯ ಸಾಂಸ್ಕೃತಿಕ ಹಾಗೂ ಯುವ ಕಲಾವೃಂದ (ರಿ) ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ.5.00 ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 174 ರಲ್ಲಿ ಮೊತ್ತ ರೂ.5.00 ಲಕ್ಷಗಳು ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಶ್ರೀ ರಾಮಾಂಜನೇಯ ಸಾಂಸ್ಕೃತಿಕ ಹಾಗೂ ಯುವ ಕಲಾವೃಂದ (ರಿ) 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ.5.00 ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಲಾಯಿತು**

## 05]. ವಿಷಯದ ಸಂಖ್ಯೆ: ತೆಆಸ್ಥಾಸ/ 170 /2018-19

**ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಅಖಿಲ ಕರ್ನಾಟಕ ಮಹಮ್ಮದೀಯರ ಕನ್ನಡ ವೇದಿಕೆ (ರಿ) ಅಭಿಯಾನ, ನಂ.501 1ನೇ ಸಿ ಮುಖ್ಯರಸ್ತೆ, ಮತ್ತಿಕರೆ, ಬೆಂಗಳೂರು-560054 ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ.1.00 ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 82ರಲ್ಲಿ ಮೊತ್ತ ರೂ.1.00 ಲಕ್ಷಗಳು ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಅಖಿಲ ಕರ್ನಾಟಕ ಮಹಮ್ಮದೀಯರ ಕನ್ನಡ ವೇದಿಕೆ (ರಿ) 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ.1.00 ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಲಾಯಿತು**

## 06]. ವಿಷಯದ ಸಂಖ್ಯೆಃ ತೆಆಸ್ಥಾಸ/ 171 /2018-19

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ತಾಯ್ನಾಡು ಕನ್ನಡ ರಕ್ಷಣಾ ವೇದಿಕೆ(ನೊಂ) ರಾಜ್ಯಾದ್ಯಾಕ್ಷರು ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ. 2.00 (ಎರಡು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 43 ರಲ್ಲಿ ಮೊತ್ತ ರೂ. 2.00 (ಎರಡು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.*

*ಈ ಸಂಬಂಧವಾಗಿ ತಾಯ್ನಾಡು ಕನ್ನಡ ರಕ್ಷಣಾ ವೇದಿಕೆ(ನೊಂ) 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ. 2.00(ಎರಡು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## 07]. ವಿಷಯದ ಸಂಖ್ಯೆಃ ತೆಆಸ್ಥಾಸ/ 172 /2018-19

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಕರ್ನಾಟಕ ಮಹಿಳಾ ಮತ್ತು ಮಕ್ಕಳಾ ಅಭಿವೃದ್ಧಿ ಚಾರಿಟಬಲ್ ಟ್ರಸ್ಟ್(ರಿ) ನಂ, 8 1ನೇ ಮುಖ್ಯರಸ್ತೆ, ವಿನಾಯಕನಗರ, ಗಣಪತಿ ದೇದಸ್ಥಾನದ ರಸ್ತೆ ವೃಷಭಾವತಿನಗರ ಕಾಮಾಕ್ಷಿಪಾಳ್ಯ ಬೆಂಗಳೂರು-560079 ರವರು 2018-19ನೇ ಸಾಲಿಗೆ ರೂ. 25.00 (ಇಪ್ಪತ್ತೈದು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 137ರಲ್ಲಿ ಮೊತ್ತ ರೂ. 10.00 (ಹತ್ತು)ಲಕ್ಷಗಳು ಮೀಸಲಿರಿಸಲಾಗಿರುತ್ತದೆ.*

*ಈ ಸಂಬಂಧವಾಗಿ ಕರ್ನಾಟಕ ಮಹಿಳಾ ಮತ್ತು ಮಕ್ಕಳಾ ಅಭಿವೃದ್ಧಿ ಚಾರಿಟಬಲ್ ಟ್ರಸ್ಟ್(ರಿ) 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ರವರ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ. 10.00 (ಹತ್ತು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## *08]. ವಿಷಯದ ಸಂಖ್ಯೆಃ ತೆಆಸ್ಥಾಸ/ 173 /2018-19*

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಸಪ್ತಸ್ವರ ಆರ್ಟ್ಸ್ ಅಂಡ್ ಕ್ರಿಯೇಷನ್(ರಿ) ನಂ, 139, 5ನೇ ಅಡ್ಡರಸ್ತೆ, ಕೆ.ಸಿ.ಹೆಚ್.ಎಸ್, ಲೇಔಟ್, ದೊಡ್ಡಬಸ್ತಿ ರಸ್ತೆ, ಜ್ಞಾನಭಾರತಿ ಪೋಸ್ಟ್, ಬೆಂಗಳೂರು - 56 ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ. 5.00 (ಐದು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 175ರಲ್ಲಿ ಮೊತ್ತ ರೂ.5.00(ಐದು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.*

*ಈ ಸಂಬಂಧವಾಗಿ ಸಪ್ತಸ್ವರ ಆರ್ಟ್ಸ್ ಅಂಡ್ ಕ್ರಿಯೇಷನ್(ರಿ) 2018-19ನೇ ಸಾಲಿನಲ್ಲಿ ಮಂಜೂರಾಗಿರುವ ಸಹಾಯಧನವನ್ನು ಬಿಡುಗಡೆ ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ 5.00(ಐದು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## *09]. ವಿಷಯದ ಸಂಖ್ಯೆಃ ತೆಆಸ್ಥಾಸ/ 174 /2018-19*

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:15-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಶ್ರೀ ಮುನೇಶ್ವರ ಸೇವಾ ಮಂಡಳಿ (ರಿ.), 4ನೇ ಮುಖ್ಯರಸ್ತೆ, ಮಾರುತಿ ಬಡಾವಣೆ, ಗಾಯಿತ್ರಿ ನಗರ, ಬೆಂಗಳೂರು-560021 ರವರು 2018-19ನೇ ಸಾಲಿಗೆ ರೂ. 2.00 (ಎರಡು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 0048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 177ರಲ್ಲಿ ಮೊತ್ತ ರೂ. 2.00 (ಎರಡು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.*

*ಈ ಸಂಬಂಧವಾಗಿ ಶ್ರೀ ಮುನೇಶ್ವರ ಸೇವಾ ಮಂಡಳಿ (ರಿ.) 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ 2.00 (ಎರಡು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 15-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## 10]. ವಿಷಯದ ಸಂಖ್ಯೆಃ ತೆಆಸ್ಥಾಸ/ 175 /2018-19

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:15-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ರಂಗೋತ್ರಿ ಮಕ್ಕಳ ರಂಗಶಾಲೆ, ಶ್ರೀರಾಮಮಂದಿರ ಆಟದ ಮೈದಾನ, ರಂಗಮಂದಿರ 4ನೇ ವಿಭಾಗ, ರಾಜಾಜಿನಗರ, ಬೆಂಗಳೂರು-560010 ರವರು 2018-19ನೇ ಸಾಲಿಗೆ ರೂ. 3.00 (ಮೂರು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 0048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 58ರಲ್ಲಿ ಮೊತ್ತ ರೂ. 3.00 (ಮೂರು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.*

*ಈ ಸಂಬಂಧವಾಗಿ ರಂಗೋತ್ರಿ ಮಕ್ಕಳ ರಂಗಶಾಲೆ 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ 3.00 (ಮೂರು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 15-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## 11]. ವಿಷಯದ ಸಂಖ್ಯೆಃ ತೆಆಸ್ಥಾಸ/ 176 /2018-19

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಶ್ರೀ ಅಂಬಾ ಮಹೇಶ್ವರಿ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ) ನಂ.10, 3ನೇ ಅಡ್ಡರಸ್ತೆ, ವೃಷಭಾವತಿನಗರ, ಬೆಂಗಳೂರು-560079 ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ. 5.00 (ಐದು) ಲಕ್ಷಗಳನ್ನು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 45ರಲ್ಲಿ ಮೊತ್ತ ರೂ. 5.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ.*

*ಈ ಸಂಬಂಧವಾಗಿ ಶ್ರೀ ಅಂಬಾ ಮಹೇಶ್ವರಿ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ) ನಮ್ಮ ಸಂಘಕ್ಕೆ ಅನುದಾನ ನೀಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ನಾಗಪುರ ವಲಯರವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ ರೂ. 5.00 ಲಕ್ಷಗಳ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## *12]. ವಿಷಯದ ಸಂಖ್ಯೆಃ ತೆಆಸ್ಥಾಸ/ 177 /2018-19*

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ರಂಗಾಭರಣ ಕಲಾ ಕೇಂದ್ರ (ರಿ) ನಂ.56, ಎಂವಿಸಿಹೆಚ್ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ನೃಪತುಂಗ ಬಡವಾಣೆ, ಆರ್.ಟಿ ನಗರ ಬೆಂಗಳೂರು- 560032 ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ.3.00(ಮೂರು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 176 ರಲ್ಲಿ ಮೊತ್ತ ರೂ.3.00 (ಮೂರು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.*

*ಈ ಸಂಬಂಧವಾಗಿ ರಂಗಾಭರಣ ಕಲಾ ಕೇಂದ್ರ (ರಿ) 2018-19ನೇ ಸಾಲಿನಲ್ಲಿ ಸಹಾಯಧನವನ್ನು ಬಿಡುಗಡೆ ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ 3.00(ಮೂರು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## *13]. ವಿಷಯದ ಸಂಖ್ಯೆಃ ತೆಆಸ್ಥಾಸ/ 178 /2018-19*

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ರಂಗದರ್ಶನ (ರಿ) ನಂ, 80/1 12ನ ಮುಖ್ಯರಸ್ತೆ, ಮತ್ತಿಕೆರೆ, ಬೆಂಗಳೂರು-560054 ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ. 2.00(ಎರಡು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ, 81 ರಲ್ಲಿ ಮೊತ್ತ ರೂ. 2.00(ಎರಡು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.*

*ಈ ಸಂಬಂಧವಾಗಿ ರಂಗದರ್ಶನ (ರಿ) 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ರವರ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ. 2.00(ಎರಡು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## 14]. ವಿಷಯದ ಸಂಖ್ಯೆ: ತೆಆಸ್ಥಾಸ/ 179 /2018-19

**ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಕರ್ನಾಟಕ ಚಿತ್ರಕಲಾ ಪರಿಷತ್ತು (ರಿ) ಆರ್ಟ್ ಕಾಂಪ್ಲೆಕ್ಸ್, ಕುಮಾರ ಕೃಪಾ ರಸ್ತೆ ಬೆಂಗಳೂರು-560001 ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ. 100.00 (ಒಂದು ನೂರು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯದ ಪುಟಸಂಖ್ಯೆ 136, ಕೌನ್ಸಿಲ್-1ರ ಪಿಕೋಡ್ 3417 ರಲ್ಲಿ ಮೊತ್ತ ರೂ. 100.00(ಒಂದು ನೂರು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಕರ್ನಾಟಕ ಚಿತ್ರಕಲಾ ಪರಿಷತ್ತು (ರಿ) 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ. 100.00(ಒಂದು ನೂರು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 15]. ವಿಷಯದ ಸಂಖ್ಯೆ: ತೆಆಸ್ಥಾಸ/ 180 /2018-19

**ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಬೆಂಗಳೂರು ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ.2.00 ಕೋಟಿಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 3416, ಪುಟ ಸಂಖ್ಯೆ 35ರಲ್ಲಿ ಮೊತ್ತ ರೂ.300.00 ಲಕ್ಷಗಳು ಮತ್ತು ಪಿಕೋಡ್ 3455, ಪುಟಸಂಖ್ಯೆ 37ರಲ್ಲಿ ಮೊತ್ತ ರೂ.20.00 ಲಕ್ಷಗಳು ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಬೌರಿಂಗ್ ಮತ್ತು ಕರ್ಜನ್ ವೈದ್ಯಕೀಯ ಮಹಾವಿದ್ಯಾಲಯ ಅಧೀನದಲ್ಲಿ ಬರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಹಾಗೂ ಹೆಚ್. ಎಸ್. ಐ. ಎಸ್ ಘೋಷಾ ಆಸ್ಪತ್ರೆಗಳ ಅಭಿವೃದ್ಧಿಗೆಂದು 2018-19 ನೇ ಸಾಲಿನ ಸಹಾಯಧನ ಮಂಜೂರು ಮಾಡುವ ಬಗ್ಗೆ ರವರ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ವಸಂತನಗರ ರವರ ಕಛೇರಿ ಪತ್ರದ ಸಂಖ್ಯೆ:ಸಕಂಅ(ವನ)/ಪಿಆರ್/61/2018-19 ದಿನಾಂಕ:16/11/2018ರಂದು ಹಿಂಬರಹವನ್ನು ಜಾರಿಮಾಡಿದ್ದು, ಸದರಿ ಹಿಂಬರಹಕ್ಕೆ ನಿರ್ದೇಶಕರು ಹಾಗೂ ಡೀನ್, ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ರವರ ಪತ್ರದ ಸಂಖ್ಯೆ:ಬೌಲೇಕವೈವಿಸಂಸಂ/ಪಿಎಸ್-187/2018-19 ದಿನಾಂಕ:19/11/2018ರಲ್ಲಿ ಈ ಸಂಸ್ಥೆಗೆ 2018-19ನೇ

ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾಗಿರುವ ಪಿಕೋಡ್ 3416 ಮತತು ಪಿಕೋಡ್ 3455ರ ಅನುದಾನದಲ್ಲಿ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಅವಶ್ಯವಿರುವ ಲಾಂಡ್ರಿ ಉಪಕರಣವನ್ನು ಖರೀದಿಸಲು ಈಗಾಗಲೇ ಇ-ಟೆಂಡರ್ ಕರೆದು ಕಡಿಮೆ ಕರ ನಮೂದಿಸಿರುವ ಸಂಸ್ಥೆಯವರಿಗೆ ಸರಬರಾಜು ಆದೇಶ ನೀಡಲಾಗಿರುತ್ತದೆ, ಇದರ ಒಟ್ಟು ಮೊತ್ತ ರೂ.2.00 ಕೋಟಿ ಪಾವತಿಸಬೇಕಾಗಿರುತ್ತದೆ ಹಾಗೂ ರೋಗಿಗಳ ಹಿತದೃಷ್ಟಿಯಿಂದ ಬೌರಿಂಗ್ ಆಸ್ಪತ್ರೆಗೆ X-ray ಉಪಕರಣ ಮತ್ತು ಹೆಚ್.ಎಸ್.ಐ.ಎಸ್ ಘೋಷಾ ಆಸ್ಪತ್ರೆಗೆ Ultrasound and X-ray ಉಪಕರಣವನ್ನು ಖರೀದಿಸಬೇಕಾಗಿರುತ್ತದೆ ಎಂದು ಹಿಂಬರಹಕ್ಕೆ ವರದಿ ನೀಡಿರುತ್ತಾರೆ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ 2.00 ಕೋಟಿ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 16]. ವಿಷಯದ ಸಂಖ್ಯೆ: ತೆಆಸ್ಥಾಸ/ 181 /2018-19

**ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:15-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಚಿಂತನ ರಂಗಕಲಾವಿದರ ಬಳಗ, ನಂ.3, ನೇಪಥ್ಯ, ಕಾವೇರಿಪುರ, ಕಾಮಾಕ್ಷಿಪಾಳ್ಯ, ಬೆಂಗಳೂರು-560079 ರವರು 2018-19ನೇ ಸಾಲಿಗೆ ರೂ. 2.00 (ಎರಡು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.

ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 0048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 60ರಲ್ಲಿ ಮೊತ್ತ ರೂ. 2.00 (ಎರಡು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಚಿಂತನ ರಂಗಕಲಾವಿದರ ಬಳಗ 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ 2.00 (ಎರಡು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 15-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 17]. ವಿಷಯದ ಸಂಖ್ಯೆ: ತೆಆಸ್ಥಾಸ/ 182 /2018-19

**ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಕಾಂತ್ರಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ (ರಿ) ನಂ.85, 2ನೇ ತಿರುವು, 2ನೇ ಮುಖ್ಯರಸ್ತೆ, ಪೈಪ್‌ಲೇನ್, 2ನೇ ಹಂತ ವಿಜಯನಗರ ಬೆಂಗಳೂರು-40 ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ. 5.00 (ಐದು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.

*ಈ ಸಂಬಂಧ ಪರಿಶೀಲಿಸಲಾಗಿ ಕಂಡಿಕೆ 62ರಲ್ಲಿ ವಿಶೇಷ ಆಯುಕ್ತರು (ಹಣಕಾಸು)ರವರ ಪ್ರಸ್ತಾವನೆಯಲ್ಲಿ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಪ್ರತಿಷ್ಠಾನ (ರಿ) ರವರಿಗೆ ದಿನಾಂಕ:- 30/07/2018ರ ಪತ್ರದಲ್ಲಿ ಆದೇಶಿಸಿರುವಂತೆ ರೂ. 5.00 ಲಕ್ಷಗಳನ್ನು 2018-19ನೇ ಸಾಲಿನಲ್ಲಿ ಪಿ-0048ರಡಿ ಒಟ್ಟಾರೆ ಉಳಿತಾಯವಾಗುವ ಅನುದಾನದಲ್ಲಿ ಪಾವತಿಸಲು ಮತ್ತು ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಜೂರಾತಿಗಾಗಿ ಸಲ್ಲಿಸಲು ಮಾನ್ಯ ಆಯುಕ್ತರಿಗೆ ಸಲ್ಲಿಸಿರುತ್ತಾರೆ. ಕಂಡಿಕೆ 69ರಲ್ಲಿ ಮಾನ್ಯ ಆಯುಕ್ತರು ಒಪ್ಪಿರುತ್ತಾರೆ.*

*ಅದರಂತೆ ಕ್ರಾಂತಿವೀರ ಸಂಗೊಳ್ಳಿರಾಯಣ್ಣ (ರಿ) 2018-19ನೇ ಸಾಲಿನಲ್ಲಿ ರೂ.5.00 ಲಕ್ಷಗಳ ಅನುದಾನಕ್ಕೆ ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸುವ ಟಿಪ್ಪಣಿ.*

***ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 07-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## *18]. ವಿಷಯದ ಸಂಖ್ಯೆ: ತೆಆಸ್ಥಾಸ/ 183 /2018-19*

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ:07-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ರೈನ್ ಟ್ರೀ ಮೀಡಿಯಾ ಮತ್ತು ಅಂಡರ್ ದಿ ರೈನ್ ಟ್ರೀ ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ.10.00 (ಹತ್ತು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-04ರಲ್ಲಿ, ಅನುದಾನ ಲಭ್ಯವಿರುವುದಿಲ್ಲ.*

*ಈ ಸಂಬಂಧವಾಗಿ ರೈನ್ ಟ್ರೀ ಮೀಡಿಯಾ ಮತ್ತು ಅಂಡರ್ ದಿ ರೈನ್ ಟ್ರೀ ನಡೆಸಿದ ಘಟನೆಗಳ ವಿವರಗಳು. 2018-19 ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯಧನ ಮಂಜೂರು ಮಾಡುವ ಬಗ್ಗೆ ರವರ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವುದಿಲ್ಲ. ಮಾಜಿ ಕೆ.ಜೆ.ಜಾರ್ಜ್‌ರವರು ಬೆಂಗಳೂರು ಅಭಿವೃದ್ಧಿ ಹಾಗೂ ಯೋಜನಾ ಸಚಿವರು ಮತ್ತು ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು ದಿನಾಂಕ:25/10/2017ರಲ್ಲಿ ಪತ್ರ ನೀಡಿ ಅನುದಾನ ಬಿಡುಗಡೆ ಮಾಡಲು ಮಾನ್ಯ ಆಯುಕ್ತರವರಿಗೆ ಮನವಿ ನೀಡಿರುತ್ತಾರೆ. ಮಾನ್ಯ ಆಯುಕ್ತರವರು 2018-19ನೇ ಸಾಲಿನ ಅನುದಾನ ಒಳಪಡಿಸಲು ಆದೇಶಿಸಿದ್ದು, ಸದರಿ ಸಂಸ್ಥೆಯವರುಗೆ ಅನುದಾನ ಮೊತ್ತ 10.00 (ಹತ್ತು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ಅಧಿಕ ಅನುದಾನಕ್ಕಾಗಿ ಪರಿಷ್ಕೃತ ಆಯವ್ಯಯ ಮಂಜೂರಾತಿ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ಅನುದಾನ ಲಭ್ಯತೆಯ ಆಧಾರದ ಮೇಲೆ ಪರಿಗಣಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## *19]. ವಿಷಯದ ಸಂಖ್ಯೆ: ತೆಆಸ್ಥಾಸ/ 184 /2018-19*

***ಪ್ರಧಾನ ಅಭಿಯಂತರರ ದಿನಾಂಕ:15-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** 2018-19 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-3305 ಅಡಿಯಲ್ಲಿ ಸರ್ವಜ್ಞನ ನಗರ, ಪುಲಿಕೇಶಿನಗರ, ರಾಜಾಜಿನಗರ,*

ವಿಜಯನಗರ, ಜಯನಗರ ವಿಧಾನ ಸಭಾ ಕ್ಷೇತ್ರಗಳಲ್ಲಿ ಡಯಾಲಿಸಿಸ್ ಕೇಂದ್ರಗಳ ಸ್ಥಾಪನೆಗೆ ಸಂಬಂಧಪಟ್ಟಂತೆ ರೂ.1500.000 ಲಕ್ಷಗಳ ಅನುದಾನ ಮೀಸಲಿರಿಸಲಾಗಿರುತ್ತದೆ, ಜಂಟಿ ಆಯುಕ್ತರು (ಆರೋಗ್ಯ) ರವರು ಹೆಬ್ಬಾಳ ವಿಧಾನ ಸಭಾ ಕ್ಷೇತ್ರ ವಾರ್ಡ್ 20 ರಲ್ಲಿ "Construction of Dialysis center building above Ganganagara maternity Home & Health center in ward No.20" ಅಂದಾಜು ಪಟ್ಟಿ ಮೊತ್ತ ರೂ.124.00 ಲಕ್ಷಗಳಿಗೆ ತಯಾರಿಸಿದ್ದು ಲೆಕ್ಕ ಶೀರ್ಷಿಕೆ ಪಿ–3305 ಅಡಿ ಅನುಮೋದನೆ ನೀಡಲು ಕೋರಿರುತ್ತಾರೆ. ಪಿ–3305 ಅಡಿ ಹೆಬ್ಬಾಳ ವಿಧಾನ ಸಭಾ ಕ್ಷೇತ್ರಕ್ಕೆ ಅನುದಾನವನ್ನು ಅನುವು ಮಾಡಿರುವುದಿಲ್ಲ. ಮುಖ್ಯ ಆರೋಗ್ಯಾಧಿಕಾರಿಗಳು ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರ ವಾರ್ಡ್–30 ರಲ್ಲಿ (ಕಾಡುಗೊಂಡನಹಳ್ಳಿ) ಈಗಾಗಲೇ ಸರ್ವಜ್ಞ ಹೆಲ್ತ್ ಇನ್‌ಸ್ಟಿಟ್ಯೂಟ್ ಎಂಬ ಸರ್ಕಾರೇತರ ಸಂಸ್ಥೆಯು ಸಮುದಾಯ ಭವನದಲ್ಲಿ (ಕೆ.ಜಿ.ಹಳ್ಳಿ ಪೋಲೀಸ್ ಸ್ಟೇಷನ್ ಪಕ್ಕದಲ್ಲಿ) 10 ಹಾಸಿಗೆಗಳುಳ್ಳ ಡಯಾಲಿಸಿಸ್ ಕೇಂದ್ರವು ಕಾರ್ಯ ನಿರ್ವಹಿಸುತ್ತಿದೆ. ಆದ್ದರಿಂದ ಪಿ–3305 ರಡಿ ಮೀಸಲಿಟ್ಟಿರುವ ಅನುದಾನವನ್ನು ಮರುವಿಂಗಡಣೆ ಮಾಡಬಹುದೆಂದು ಅಭಿಪ್ರಾಯಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರು ರವರ ಆದೇಶದಂತೆ 2018–19 ರ ಪಿ– 3305 ಅಡಿ ಹೆಬ್ಬಾಳ ವಿಧಾನ ಸಭಾ ಕೇತ್ರ ಹೆಸರು ಸೇರ್ಪಡಿಸಿಕೊಂಡು ಪ್ರಸ್ಥಾಪಿತ ಕಾಮಗಾರಿಯಾದ "Construction of Dialysis center building above Ganganagara maternity Home & Health center in ward No.20"ಗೆ ರೂ.124.00 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ಜಾಬ್ ಸಂಖ್ಯೆ ನೀಡಲು ಸಮಿತಿ ಮುಂದೆ ಮರು–ಹೊಂದಾಣಿಕೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 15–02–2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 201. ವಿಷಯದ ಸಂಖ್ಯೆ: ತೆಆಸ್ಥಾಸ/ 185 /2018–19

**ಪ್ರಧಾನ ಅಭಿಯಂತರರ ದಿನಾಂಕ:15–02–2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** 2018–19ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ–0055 ರ ಅಡಿಯಲ್ಲಿ ಒಟ್ಟು ಮೊತ್ತ ರೂ.400.00 ಲಕ್ಷಗಳನ್ನು ಅನುವು ಮಾಡಿದ್ದು, ಈ ಅನುದಾನದಲ್ಲಿ 08 ವಲಯಗಳಲ್ಲಿ ತೆರವುಗೊಳಿಸುವ ಕಾರ್ಯಗಳಿಗೆ ಎಲ್ಲಾ ವಾರ್ಡ್‌ಗಳಲ್ಲಿ ಕ್ರಮವನ್ನು ಕೈಗೊಂಡಿದ್ದು ಈ ಪೈಕಿ ವಾರ್ಡ್ ನಂ:63 ರಲ್ಲಿ ಸ್ವತ್ತಿನ ಸಂಖ್ಯೆ:87, ನಂದಿ ದುರ್ಗಾ ರಸ್ತೆ, 4ನೇ ಮಹಡಿಯ ವ್ಯತಿರಿಕ್ತ ಕಟ್ಟಡವನ್ನು ತೆರವುಗೊಳಿಸಲು ರೂ.4.00 ಲಕ್ಷಗಳಿಗೆ ಜಾಬ್ ಕೋಡ್ ನೀಡಲು ಜಂಟಿ ಆಯುಕ್ತರು (ಪೂರ್ವ) ರವರು ಕಂಡಿಕೆ (11) ರಲ್ಲಿ ವರದಿ ಸಲ್ಲಿಸಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ ರವರು ಕಂಡಿಕೆ (15) ರಲ್ಲಿ ಲೆಕ್ಕ ಶೀರ್ಷಿಕೆ ಪಿ–0055 ರಲ್ಲಿ ಅನುದಾನ ಲಭ್ಯವಿರುವುದಿಲ್ಲವೆಂದು ತಿಳಿಸಿ 2018–19ರ ಪಿ–0055 ಅಡಿ ಹೆಚ್ಚುವರಿ ಅನುದಾನ ಅಳವಡಿಸಿಕೊಂಡು ಜಾಬ್ ಕೋಡ್ ನೀಡಲು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ವಾರ್ಡ್ ನಂ:63 ರಲ್ಲಿ ಸ್ವತ್ತಿನ ಸಂಖ್ಯೆ:87, ನಂದಿ ದುರ್ಗಾ ರಸ್ತೆ, ಬೆಂಗಳೂರು ರಲ್ಲಿ 4ನೇ ಮಹಡಿಯ ವ್ಯತಿರಿಕ್ತ ಕಟ್ಟಡವನ್ನು ತೆರವುಗೊಳಿಸಲು ರೂ.4.00 ಲಕ್ಷಗಳಿಗೆ ಕೊರತೆ ಅನುದಾನವನ್ನು ಮರು ಹೊಂದಾಣಿಕೆಯ ಅನುಮೋದನೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸದರಿ ಪ್ರಸಸ್ತಾವನೆಗೆ ಸಂಬಂಧಿಸಿದಂತೆ, ನ್ಯಾಯಾಲಯದ ಆದೇಶಾನುಸಾರ ಕ್ರಮಕೈಗೊಳ್ಳುವುದು ಹಾಗೂ ಸದರಿ ವೆಚ್ಚವನ್ನು ಸಂಬಂಧಿಸಿದ ಕಟ್ಟಡದ ಮಾಲೀಕರಿಂದ ವಸೂಲಿಸಲು ಹಾಗೂ ತೆರವುಗೊಳಿಸಲು ತಗಲುವ ವೆಚ್ಚವನ್ನು 2019–20ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಂಡು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## *211. ವಿಷಯದ ಸಂಖ್ಯೆ: ತೆಆಸ್ಥಾಸ/ 186 /2018-19*

***ಆಯುಕ್ತರ ದಿನಾಂಕ:29-01-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 8 ವಲಯಗಳ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ಭೂವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸುವುದು, ಮೇಲ್ದರ್ಜೆಗೇರಿಸಿ ಸುಂದರೀಕರಣಗೊಳಿಸುವುದು ಹಾಗೂ ನಿರ್ವಹಣೆ ಕಾಮಗಾರಿಗೆ ಸಂಬಂಧಿಸಿದಂತೆ 2018-19ನೇ ಸಾಲಿನ ಲೆಕ್ಕಶೀರ್ಷಿಕೆ ಪಿ0088, ಪಿ3250, ಪಿ3246, ಪಿ3331 ಮತ್ತು ಇತರೆ ಲೆಕ್ಕಶೀರ್ಷಿಕೆಗಳಡಿಯಲ್ಲಿ ಅನುದಾನವು ಮೀಸಲಿರಿಸದೇ ಇದ್ದು ಹಾಗೂ ಕೆಲವು ಲೆಕ್ಕಶೀರ್ಷಿಕೆಗಳಲ್ಲಿ ಮೀಸಲಿರಿಸಿದ್ದ ಅನುದಾನವು ಸಂಪೂರ್ಣವಾಗಿ ವೆಚ್ಚವಾಗಿರುತ್ತದೆ.*

*ಆದ್ದರಿಂದ, ಸದರಿ ಲೆಕ್ಕಶೀರ್ಷಿಕೆಗಳಡಿ ಮಾರ್ಚ್2019ರ ಅಂತ್ಯದವರೆವಿಗೆ ಹಾಗೂ ಈಗಾಗಲೇ ನಿರ್ವಹಿಸಿರುವ ಕಾಮಗಾರಿಗಳ ಬಾಕಿ ಬಿಲ್ಲುಗಳ ಮೊತ್ತ ಅಂದಾಜು ರೂ.20.00 ಕೋಟಿಗಳಿಗಿಂತಲೂ ಹೆಚ್ಚಿನ ಮೊತ್ತದ ಅವಶ್ಯಕತೆಯಿರುತ್ತದೆ.*

*ಈ ಹಿನ್ನಲೆಯಲ್ಲಿ 2018-19ನೇ ಸಾಲಿನಲ್ಲಿ ಅನುದಾನ ಲಭ್ಯತೆಗನುಸಾರ ವೆಚ್ಚ ಭರಿಸಿ, ಪರಿಷ್ಕೃತ ಆಯವ್ಯಯದಲ್ಲಿ ಅಳಡಿಸಿಕೊಳ್ಳುವ ನಿಬಂಧನೆ ಮೇಲೆ ಪಾವತಿಸುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನ ಕೈಗೊಳ್ಳುವ ಕುರಿತು ಮಂಡಿಸಲಾದ ಟಿಪ್ಪಣಿ.*

***ನಿರ್ಣಯ: ಆಯುಕ್ತರ ದಿನಾಂಕ: 29-01-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## *221. ವಿಷಯದ ಸಂಖ್ಯೆ: ತೆಆಸ್ಥಾಸ/ 187 /2018-19*

***ಪ್ರಧಾನ ಅಭಿಯಂತರರ ದಿನಾಂಕ:08-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *2018-19ನೇ ಸಾಲಿನ ಆಯವ್ಯಯದ ಪಾಲಿಕೆಯ ಪೂರ್ವ ವಲಯದ ವಾರ್ಡ್‌ಗಳ ವ್ಯಾಪ್ತಿಯಲ್ಲಿ ನಿಗಧಿಪಡಿಸಿದ ಅನುದಾನಕ್ಕೆ 2018-19ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-3156 ರ ಅನುದಾನದ ಅಡಿಯಲ್ಲಿ ಅಳವಡಿಸಿಕೊಂಡು ಜಾಬ್ ಸಂಖ್ಯೆ ನೀಡಲು ಹಾಗೂ ಕ್ರಿಯಾ ಯೋಜನೆ ಅನುಮೋದನೆಗೆ ಮುಖ್ಯ ಅಭಿಯಂತರರು (ಪೂರ್ವ ವಲಯ) ರವರು ಪ್ರಸ್ತಾವನೆ ಸಲ್ಲಿಸಿದ್ದು, ಕಾಮಗಾರಿಯ ವಿವರಗಳು ಈ ಕೆಳಕಂಡಂತಿರುತ್ತದೆ.*

| ಕ್ರ.ಸಂ | ಕಾಮಗರಿಗಳ ವಿವರ | ಅಂದಾಜು ಪಟ್ಟಿ (ರೂ.ಲಕ್ಷಗಳಲ್ಲಿ) |
|---|---|---|
| 1 | Providing Emergency Relief Task Force team to East Zonal Control Room in Ward No.111 Shanthinagar in Shanthinagar Sub Division. | 99.85 |

*ಮೇಲ್ಕಾಣಿಸಿದ ಕಾಮಗಾರಿಯನ್ನು ಮುಖ್ಯ ಅಭಿಯಂತರರು (ಪೂರ್ವ ವಲಯ) ರವರು ಪ್ರಸ್ತಾಪಿತ ಕಾಮಗಾರಿಯ ಅಂದಾಜು ಮೊತ್ತವಾದ ರೂ.99.85 ಲಕ್ಷಗಳಿಗೆ ಜಾಬ್ ಕೋಡ್ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.*

*ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ರವರು ಅನುದಾನ ಲಭ್ಯತೆಯ ಬಗ್ಗೆ ವರದಿ ಮಾಡಿರುವಂತೆ, ಪಿ-3156 ರ ಅಡಿ ರೂ.125.00 ಲಕ್ಷಗಳ ಅನುದಾನ ಮೀಸಲಿರಿಸಿದೆ, ರೂ.23.90 ಲಕ್ಷಗಳ ಅನುದಾನ ಅಳವಡಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ನಿರ್ಣಯ ಸಂಖ್ಯೆ:252/2017-18, ದಿನಾಂಕ:06/08/2018 ರಲ್ಲಿ ನಿರ್ಣಹಿಸಿರುತ್ತದೆ, ರೂ.148.90 ಲಕ್ಷಗಳಲ್ಲಿ ರೂ.47.80 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿದೆ, ರೂ.96.75 ಲಕ್ಷಗಳ ಕಡತ ಅನುಮೋದನೆಗೆ ಸಲ್ಲಿಸಲಾಗಿದೆ, ಪಿ-3156 ರ ಅಡಿ ರೂ.4.36 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ, ಸದರಿ ಪ್ರಸ್ತಾವನೆಗೆ ಅನುದಾನ ಕೊರತೆ ಇದ್ದು, 2018-19 ರ ಪಿ-3156 ರ ಅಡಿ ರೂ.99.85 ಲಕ್ಷಗಳ ಅನುದಾನ ಅಳವಡಿಸಿಕೊಂಡು ಜಾಬ್ ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ಅವಶ್ಯವಿರುತ್ತದೆ ಎಂದು ವರದಿ ಮಾಡಿದ್ದು, ಮೇಲ್ಕಂಡ ಉಲ್ಲೇಖದ ಅಡಿಯಲ್ಲಿ ಮಾನ್ಯ*

ಆಯುಕ್ತರು ರವರು ಪ್ರಸ್ತಾವನೆಯ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯೊಂದಿಗೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಮಾನ್ಯ ಆಯುಕ್ತರು ರವರು ಆದೇಶಿಸಿಂತೆ, ಸದರಿ ಕಾಮಗಾರಿಗೆ ಪಿ–3156 ರ ಅಡಿಯಲ್ಲಿ Providing Emergency Relief Task Force team to East Zonal Control Room in Ward No.111 Shanthinagar in Shanthinagar Sub Division ಕಾಮಗಾರಿಯ ಅಂದಾಜು ಮೊತ್ತವಾದ ರೂ.99.85 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ಜಾಬ್ ಸಂಖ್ಯೆ ನೀಡಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 08–02–2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 231. ವಿಷಯದ ಸಂಖ್ಯೆ: ತೆಆಸ್ಥಾಸ/ 188 /2018–19

**ಪ್ರಧಾನ ಅಭಿಯಂತರರ ದಿನಾಂಕ:08–02–2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಜಂಟಿ ಆಯುಕ್ತರು (ದಕ್ಷಿಣ) ರವರು ಕಂಡಿಕೆ (139) ರಲ್ಲಿ ಸಲ್ಲಿಸಿರುವ ವರದಿಯಲ್ಲಿ ಈ ಕೆಳಕಂಡ ನಾಲ್ಕು ಕಾಮಗಾರಿಗಳಿಗೆ ಜಾಬ್ ಕೋಡ್‌ಗಳನ್ನು ಲೆಕ್ಕಶೀರ್ಷಿಕೆ ಪಿ–1771 ಮತ್ತು ಪಿ–0622ರಲ್ಲಿ ಅನುವು ಮಾಡಿದ್ದು, ಕಾಮಗಾರಿಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಡಿ–ಫ್ರೀಜ್ ಮಾಡಲು ಕೋರಿರುತ್ತಾರೆ.

| SL No | Name of the Division | Ward No | Name of the Works | Est. Cost (in Lakhs) |
|---|---|---|---|---|
| 1 | Vijayanagara | 157 | Providing CC to narrow interior conservance road from Bytarayanapura main road ragi mill to timber yard main road near 58 bus stop in Ward No.157 (P-1771) | 6.95 |
| 2 | | 133 | Improvements to drains and footpath 1st C cross road behind Maruthi Medicals in Ward No.133 (P-1771) | 8.00 |
| 3 | Chickpet | 144 | Maintenance in Ward No.144 (P-1771) | 12.00 |
| 4 | Basavanagudi | 162 | Improvements to drain and footpath to northside of the Dr.Venkatesh Murthy road in Ward No.162 (P-0622) | 30.00 |

ಮುಖ್ಯ ಆರ್ಥಿಕ ಅಧಿಕಾರಿ ರವರು ಕಂಡಿಕೆ (145) ರಲ್ಲಿ ಲೆಕ್ಕಶೀರ್ಷಿಕೆ ಪಿ–1771ರ ಅಡಿಯಲ್ಲಿ ಮುಂದುವರೆದ ಕಾಮಗಾರಿಗಳಿಗೆ ರೂ.7015.00 ಲಕ್ಷಗಳು ಅನುದಾನ ಮೀಸಲಿರಿಸಿದ್ದು ಮತ್ತು ಪಿ–0622 ರ ಅಡಿಯಲ್ಲಿ ಮುಂದುವರೆದ ಕಾಮಗಾರಿಗಳಿಗೆ ಅನುದಾನ ಮೀಸಲಿರಿಸಿರುವುದಿಲ್ಲವೆಂದು ಹಾಗೂ ಸಮಿತಿಗೆ ಸಲ್ಲಿಸಲು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ವಾರ್ಡ್ ವಾರ್ಡ್ ನಂ:157, 133, 144 and 162 ರಲ್ಲಿ ಮೇಲೆ ಗುರುತಿಸಿರುವ 3 ಕಾಮಗಾರಿಗಳಿಗೆ ಪಿ–1771ರ ಅಡಿಯಲ್ಲಿ 2018–19ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯವಿದ್ದು ಮತ್ತು 1 ಕಾಮಗಾರಿಗೆ ಪಿ–0622ರ ಅಡಿಯಲ್ಲಿ 2018–19ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯವಿರುವುದಿಲ್ಲವೆಂದು ಮತ್ತು ಎಲ್ಲಾ ಕಾಮಗಾರಿಗಳಿಗೆ ಡಿ–ಫ್ರೀಜ್ ಹಾಗೂ 1 ಕಾಮಗಾರಿಗೆ ಪಿ–0622ಗೆ ಮೊತ್ತವನ್ನು ಮರು ಹೊಂದಾಣಿಕೆ ಮಾಡಿ ಅನುಮೋದನೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಲೆಕ್ಕಶೀರ್ಷಿಕೆ ಪಿ1771ರಡಿಯಲ್ಲಿ ವಾರ್ಡ್ ಸಂಖ್ಯೆ: 157, 133 ಮತ್ತು 144 ರಲ್ಲಿನ ಕಾಮಗಾರಿಗಳನ್ನು ಡಿ–ಫ್ರೀಜ್ ಮಾಡಲು ಒಪ್ಪುತ್ತಾ, ಲೆಕ್ಕಶೀರ್ಷಿಕೆ ಪಿ0622ರಡಿಯಲ್ಲಿನ ವಾರ್ಡ್ ಸಂಖ್ಯೆ: 162ರ ಕಾಮಗಾರಿಯನ್ನು 2019–20ನೇ ಸಾಲಿನ ಆಯವ್ಯಯದಲ್ಲಿ ಪರಿಗಣಿಸಬಹುದೆಂದು ಸಮಿತಿಯು ತೀರ್ಮಾನಿಸಿತು.**

## *241. ವಿಷಯದ ಸಂಖ್ಯೆಃ ತೆಆಸ್ಥಾಸ/ 189 /2018-19*

***ಆಯುಕ್ತರ ದಿನಾಂಕ:09-10-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹ ಕಂದಾಯ ಅಧಿಕಾರಿ (ಗಾಂಧಿನಗರ) ಉಪ ವಿಭಾಗದ ವಾರ್ಡ್-94, ಗಾಂಧಿನಗರ, 6ನೇ ಮುಖ್ಯರಸ್ತೆ, ಮೈಸೂರ್ ಬಜಾರ್ ಪಕ್ಕದಲ್ಲಿನ 4x4 ಅಡಿಗಳ ಜಾಗವನ್ನು ಶ್ರೀ.ಅಬ್ದುಲ್ ಬಷೀರ್ (ಅಂಗವಿಕಲರು) ರವರಿಗೆ ಪೆಟ್ಟಿಗೆ ಅಂಗಡಿ ನಡೆಸಲು (ಗುತ್ತಿಗೆಗೆ) ದಿನಾಂಕ: 17-11-2017 ರಿಂದ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿ ರೂ.467/- ಮಾಸಿಕ ಬಾಡಿಗೆ ನಿಗಧಿಪಡಿಸಲಾಗಿದ್ದು, ಅದರಂತೆ ಗುತ್ತಿಗೆದಾರರ ಏಪ್ರೀಲ್-2017 ರವರೆಗೆ ಬಾಡಿಗೆ ಮೊತ್ತವನ್ನು ಪಾವತಿಸಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ: 16-11-2017ಕ್ಕೆ ಮುಗಿದಿರುವ ಹಿನ್ನೆಲೆಯಲ್ಲಿ ಗುತ್ತಿಗೆ ಕರಾರು ಪತ್ರ ನವೀಕರಣಕ್ಕಾಗಿ ಹಾಗೂ 4*4 ಅಡಿಗಳ ಜಾಗದ ಬದಲಿಗೆ ಹೆಚ್ಚುವರಿ 4*6 ಅಡಿಗಳ ಜಾಗ ಅರ್ಜಿ ಮುಖೇನ ಕೋರಿರುತ್ತಾರೆ.*

*ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ನಿರ್ದೇಶಕರು ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ನಿರ್ದೇಶನಾಲಯ ಕಛೇರಿ, ಕರ್ನಾಟಕ ಸರ್ಕಾರ ರವರು ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಪತ್ರ ಬರೆದು ಅರ್ಜಿದಾರರು ಅಂಗವಿಕಲರಾಗಿ ರುವುದರಿಂದ ಅವರ ಜೀವನೋಪಾಯಕ್ಕಾಗಿ ಅವರಿಗೆ ಹಾಲಿ ನೀಡಿರುವ ಗುತ್ತಿಗೆ ಜಾಗವನ್ನು ನವೀಕರಿಸಲು ಶಿಫಾರಸ್ಸು ಮಾಡಿರುತ್ತಾರೆ.*

*ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ಸರ್ಕಾರದ ಮಾರ್ಗಸೂಚಿ ಸಂಖ್ಯೆ:ನೋ.ಮು/ಸಿವಿಸಿ/19/ 16-17 ದಿನಾಂಕ:30-03-2017 ರಂತೆ ವಾಣಿಜ್ಯ ಚಟುವಟಿಕೆಗಳಿಗೆ ಚದರಡಿ ಒಂದಕ್ಕೆ ರೂ.12505/-ಗಳಾಗಿದ್ದು, ಅರ್ಜಿದಾರರಿಗೆ ನೀಡಲು ಉದ್ದೇಶಿಸಿರುವ ಸ್ವತ್ತಿನ ಅಳತೆ 4*6=24 ಚದರಡಿ ಒಂದಕ್ಕೆ 12505*24 = 3,00,120/- ರೂಗಳಾಗುತ್ತದೆ. ಶೇ 10% ರಂತೆ ಪರಿಗಣಿಸಲಾಗಿ ವಾರ್ಷಿಕ ಗುತ್ತಿಗೆ ರೂ.30,012/- ಗಳಾಗುತ್ತದೆ. ಅಂದರೆ ಮಾಸಿಕ ಗುತ್ತಿಗೆ ಹಣವು ರೂ.2501/- ಗಳಾಗುತ್ತದೆ. ಅರ್ಜಿದಾರರು ಅಂಗವಿಕಲರಾಗಿರುವುದರಿಂದ ಶೇ50% ರಷ್ಟು ರಿಯಾಯಿತಿ ನೀಡಿದ್ದಲ್ಲಿ ಮಾಸಿಕ ಗುತ್ತಿಗೆ ಮೊತ್ತ ರೂ.1251/- ಗಳಾಗುತ್ತದೆ.*

*ಈ ಮೇಲ್ಕಂಡ ಎಲ್ಲಾ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ, ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ* ***ಮಾನ್ಯ ಆಯುಕ್ತರ ದಿನಾಂಕ: 09-10-2018ರ ಟಿಪ್ಪಣಿಯನ್ನು ಟಿಪ್ಪಣಿಯನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳೊಡನೆ ಚರ್ಚಿಸಿ, ಪ್ರಸ್ತಾಪಿತ ಗುತ್ತಿಗೆದಾರರಾದ ಶ್ರೀ ಅಬ್ದುಲ್ ಬಷಿರ್‌ರವರಿಗೆ 4*4 ಅಡಿಗಳ ಬದಲಾಗಿ 4*6 ಅಡಿಗಳನ್ನು ಮತ್ತು ಈ ಹಿಂದೆ ಗುತ್ತಿಗೆ ಅವಧಿ ಮುಕ್ತಾಯವಾದ ದಿನಾಂಕದಿಂದ ಮುಂದಿನ 5 ವರ್ಷಗಳಿಗೆ ಗುತ್ತಿಗೆಯನ್ನು ನವೀಕರಿಸುವ ಸಂಬಂಧ ಮಾಸಿಕ ಗುತ್ತಿಗೆ ಮೊತ್ತ ನಿಗಧಿಪಡಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಖಾಂತರ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05.02.2019ರ ಸಭೆಯ ನಿರ್ಣಯ.***

***ನಿರ್ಣಯ: ವಾರ್ಡಿನ ಸದಸ್ಯರು ಪ್ರಸ್ತಾಪಿತ ಸ್ಥಳದಲ್ಲಿ ಬೇರೆಯವರು ಅಂಗಡಿ ನಡೆಸುತ್ತಿದ್ದು, ಸಬ್‌ಲೀಸ್ (ಮರುಗುತ್ತಿಗೆ) ಮಾಡಿರುತ್ತಾರೆಂದು, ತಿಳಿಸಿರುತ್ತಾರೆ. ಆದ್ದರಿಂದ ಗುತ್ತಿಗೆ ಸ್ಥಳವು ಸಬ್‌ಲೀಸ್ ಆಗಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಸಂಪೂರ್ಣ ಮಾಹಿತಿಯೊಂದಿಗೆ ಸಮಿತಿಯ ಮುಂದೆ ಪುನರ್ ಮಂಡಿಸಲು ಕಡತವನ್ನು ಹಿಂದಿರುಗಿಸಿದೆ.***

## 251. ವಿಷಯದ ಸಂಖ್ಯೆಃ ತೆಆಸ್ಥಾಸ/ 190 /2018-19

**ಆಯುಕ್ತರ ದಿನಾಂಕ:20-11-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ವಾರ್ಡ್ ನಂ:146, ಲಕ್ಕಸಂದ್ರ ವ್ಯಾಪ್ತಿಯಲ್ಲಿನ 16ನೇ ಅಡ್ಡರಸ್ತೆಯಲ್ಲಿರುವ ಶ್ರೀ ಮಹಾಗಣಪತಿ ದೇವಾಲಯ ಟ್ರಸ್ಟ್ ರವರು ದೇವಾಲಯದ ಚಟುವಟಿಕೆಗಳಿಗೆ ಸ್ಥಳಾವಕಾಶದ ಕೊರತೆ ಇರುವ ಮೇರೆಗೆ ಸದರಿ ದೇವಾಲಯದ ಸಮೀಪದ ಪಾಲಿಕೆಯ ಸ್ವತ್ತಿನ ಕಟ್ಟಡದಲ್ಲಿನ ಮೊದಲನೇ ಮಹಡಿಯಲ್ಲಿರುವ ಎರಡು ಕೊಠಡಿಗಳನ್ನು ಗ್ರಂಥಾಲಯಕ್ಕೆ ಬಿಟ್ಟುಕೊಟ್ಟಲ್ಲಿ, ದೇವಸ್ಥಾನಕ್ಕೆ ಹೊಂದಿಕೊಂಡಿರುವ 3 ಕೊಠಡಿಗಳನ್ನು ತೆರವುಗೊಳಿಸಿ ಹಸ್ತಾಂತರ ಮಾಡಬಹುದಾಗಿದ್ದು, ಮೇಲ್ಕಂಡ ಎರಡು ಕೊಠಡಿಗಳು ಪಾಲಿಕೆಯ ಉಪಯೋಗಕ್ಕೆ ಅವಶ್ಯಕತೆಯಿರುವುದಾಗಿ ಕಾಮಗಾರಿ ಇಲಾಖೆಯ ಹಾಗೂ ದಕ್ಷಿಣ ವಲಯದ ಕಲ್ಯಾಣಾಧಿಕಾರಿಗಳ ವರದಿಯಲ್ಲಿ ತಿಳಿಸಿರುವುದರಿಂದ, ಗ್ರಂಥಾಲಯದ ಪೈಕಿ **11½ x 5½** ಮೀ. ವಿಸ್ತೀರ್ಣ ಅಳತೆಯ ಉಗ್ರಾಣದ ಕೊಠಡಿಯನ್ನು ಸದರಿ ಟ್ರಸ್ಟ್ ರವರಿಗೆ ಹಸ್ತಾಂತರ ಮಾಡಿಕೊಡುವಂತೆ ಕೋರಿರುತ್ತಾರೆ. ಆದರೆ, ಪಾಲಿಕೆಯ ಆಸ್ತಿಯನ್ನು ಗುತ್ತಿಗೆ/ಕ್ರಯಕ್ಕೆ ನೀಡಬೇಕಾದಲ್ಲಿ ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ಪಾಲಿಕೆಯಲ್ಲಿ ಅಳವಡಿಸಿಕೊಂಡಿರುವ ನಿಯಮಗಳು ಈ ಕೆಳಕಂಡ ಕಾಯ್ದೆ ಅನ್ವಯ ಕ್ರಮವಹಿಸಬೇಕಾಗಿರುತ್ತದೆ.

1. ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.
2. **ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ: 02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**

ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

No movable property exceeding such sum in value as may be prescribed shall be sold otherwise than by public auction;
No property whether movable or immovable of whatever value shall be transferred free of cost or for an upset price;
no lease of any immovable property exceeding five years shall be granted;
no immovable property shall be disposed of by sale or by other transfer;
Except with the previous sanction of the Government. ಎಂದಿರುತ್ತದೆ.

ಪ್ರಸ್ತಾಪಿತ ಸ್ವತ್ತಿನ ಅಳತೆಯು **11½ x 5½** ಮೀ ಅಂದರೆ 63.25=207.5 ಚದರಡಿಗಳಾಗಿದ್ದು, ಪ್ರಸಕ್ತ ಮಾರುಕಟ್ಟೆ ದರವು (2017-18) ಚದರ ಮೀಟರ್ 1ಕ್ಕೆ ರೂ.54500/- ಗಳಾಗಿದ್ದು, ಚದರಡಿ 1ಕ್ಕೆ ರೂ.5063/- ಗಳಾಗಿದ್ದು, ಸ್ವತ್ತಿನ ಮೌಲ್ಯ 207.5x5063=10,50,572/- ಗಳಾಗುತ್ತದೆ. ವಾಣಿಜ್ಯಕ್ಕೆ ಶೇ40% ರಷ್ಟು ಹೆಚ್ಚಿಸಿದಲ್ಲಿ ರೂ.10,50,572+4,20,229=14,70,801/- ಸ್ವತ್ತಿನ ಒಟ್ಟು ಮೌಲ್ಯ ರೂ. 14,70,801/-

ಗಳಾಗುತ್ತದೆ. ಸ್ವತ್ತಿನ ಮೌಲ್ಯ ಶೇ 10% ರಂತೆ ಪರಿಗಣಿಸಿದಾಗ ವಾರ್ಷಿಕ ರೂ.1,47,080/- ಗಳು ಮಾಸಿಕ ರೂ.12,256/- ಗಳನ್ನು ನಿಗಧಿಪಡಿಸಬಹುದಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಾರ್ಡ್ ನಂ:146, ಲಕ್ಕಸಂದ್ರ ವ್ಯಾಪ್ತಿಯಲ್ಲಿ ಬರುವ 16ನೇ ಅಡ್ಡರಸ್ತೆಯಲ್ಲಿರುವ ಗ್ರಂಥಾಲಯದ ಕಟ್ಟಡದಲ್ಲಿರುವ ಹೆಚ್ಚುವರಿಯಾಗಿರುವ ಉಗ್ರಾಣದ ಕೊಠಡಿಗಳನ್ನು ಶ್ರೀ ಮಹಾಗಣಪತಿ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಕೊಠಡಿಗಳ ಸ್ಥಳವನ್ನು ಟ್ರಸ್ಟ್ ರವರಿಗೆ ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ **ಮಾನ್ಯ ಆಯುಕ್ತರ ದಿನಾಂಕ: 20-11-2018ರ ಟಿಪ್ಪಣಿಯನ್ನು ಸಭೆಗೆ ಹಾಜರಿದ್ದ ಅಧಿಕಾರಿಗಳೊಡನೆ ಚರ್ಚಿಸಲಾಗಿ, ಸದರಿ ಪ್ರಸ್ತಾವನೆಯನ್ನು ಒಪ್ಪುತ್ತಾ, 5 ವರ್ಷಗಳ ಗುತ್ತಿಗೆ ಅವಧಿಗೆ ಶ್ರೀ ಮಹಾಗಣಪತಿ ದೇವಾಲಯ ಟ್ರಸ್ಟ್ ರವರಿಗೆ ನೀಡಲು ಅಂತಿಮ ತೀರ್ಮಾನಕ್ಕಾಗಿ ತೆರಿಗೆ ಮತ್ತು ಸ್ಥಾಯಿ ಸಮಿತಿಯ ಮುಖಾಂತರ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05.02.2019ರ ಸಭೆಯ ನಿರ್ಣಯ.**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-02-2019ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.15,000/-(ಹದಿನೈದು ಸಾವಿರ ಮಾತ್ರ)ಗಳಿಗೆ ಗುತ್ತಿಗೆಯನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## 261. ವಿಷಯದ ಸಂಖ್ಯೆಃ ತೆಆಸ್ಥಾಸ/ 191 /2018-19

**ಆಯುಕ್ತರ ದಿನಾಂಕ:07-12-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಬೆಸ್ಕಾಂ ಪ್ರಾಧಿಕಾರಕ್ಕೆ ಉದ್ದೇಶಿತ ಕಛೇರಿಯ ಕಾರ್ಯನಿರ್ವಹಿಸಲು ವಾರ್ಡ್ ನಂ:110, ಸಂಪಂಗಿರಾಮನಗರ, 9ನೇ ಕ್ರಾಸ್‌ನಲ್ಲಿರುವ ಬನ್ನಪ್ಪ ಪಾರ್ಕ್‌ನಲ್ಲಿರುವ ಪಾಲಿಕೆ ಕಟ್ಟಡವನ್ನು ಬೆಸ್ಕಾಂ (ಪಶ್ಚಿಮ) 5ನೇ ಉಪ ವಿಭಾಗ, ಕಾರ್ಯಪಾಲಕ ಘಟಕ-15ರ ಕಛೇರಿಗೆ ಗುತ್ತಿಗೆಗೆ ನೀಡುವಂತೆ ಸಾರ್ವಜನಿಕರ ಮನವಿಯ ಮೇರೆಗೆ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ನಿಕಟಪೂರ್ವ ಶಾಸಕರು ಹಾಗೂ ಕರ್ನಾಟಕ ಕೊಳಗೇರಿ ಮಂಡಳಿ ಅಧ್ಯಕ್ಷರು ಆಗಿದ್ದಂತಹ ಶ್ರೀಯುತ.ಆರ್.ವಿ.ದೇವರಾಜ್ ರವರು ಶಿಫಾರಸ್ಸು ಪತ್ರ ನೀಡಿ, ಇದರಲ್ಲಿ ಸಕ್ಷಮ ಬೆಸ್ಕಾಂ ಪ್ರಾಧಿಕಾರಕ್ಕೆ ಸೂಚಿತ ಜಾಗವನ್ನು ಪಾಲಿಕೆ ವತಿಯಿಂದ ನೀಡಲು ಕ್ರಮವಹಿಸುವಂತೆ ವಾರ್ಡ್ ನಂ:110ರ ಪಾಲಿಕೆ ಸದಸ್ಯರಾದ ಮಾನ್ಯ ಶ್ರೀ.ಆರ್.ವಸಂತಕುಮಾರ್ ರವರಿಗೆ ಮನವಿ ಮಾಡಿರುತ್ತಾರೆ.

ಪ್ರಸ್ತುತ ಬೆಸ್ಕಾಂ ಪ್ರಾಧಿಕಾರದ 5ನೇ ಉಪ ವಿಭಾಗದ ಕಾರ್ಯವ್ಯಾಪ್ತಿಗೆ ಚಿಕ್ಕಪೇಟೆ, ಶಿವಾಜಿನಗರ, ಗಾಂಧಿನಗರ ಉಪ ವಿಭಾಗದ ಬಹುತೇಕ ಪ್ರದೇಶಗಳು ಒಳಪಟ್ಟಿದ್ದು, ಹಾಲಿ ಹಡ್ಸನ್ ವೃತ್ತದಲ್ಲಿನ ಕೃಷಿ ಭವನದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸದರಿ ಕಛೇರಿಗೆ ಸಾರ್ವಜನಿಕರು ಬಂದು ಸೇವಾ ಸೌಲಭ್ಯಗಳನ್ನು ಪಡೆಯಲು ಕಷ್ಟ ಸಾಧ್ಯವಾಗಿರುವುದರಿಂದ ಸೂಚಿತ ಜಾಗವನ್ನು ಮಂಜೂರು ಮಾಡಲು ಕೋರಿರುತ್ತಾರೆ.

ಸದರಿ ಕಟ್ಟಡವನ್ನು ಕಾಮಗಾರಿ ಇಲಾಖೆಯಿಂದ ಸ್ಥಳ ಪರಿಶೀಲನೆ ಮತ್ತು ನಕ್ಷೆ ವರದಿಗಳೊಂದಿಗೆ ಪಾಲಿಕೆಯ ಆಸ್ತಿಯಾಗಿರುವ ಸದರಿ ಕಟ್ಟಡ ಸುಮಾರು ವರ್ಷಗಳಿಂದ ನಿರ್ವಹಣೆ ಇಲ್ಲದೇ ಹಾಳಾಗುತ್ತಿರುವ ಬದಲು ಸಾರ್ವಜನಿಕ ಹಿತದೃಷ್ಟಿಯಿಂದ ಕೆ.ಎಂ.ಸಿ ಕಾಯ್ದೆ 1976ರ ಅನ್ವಯ ಈ ಕಟ್ಟಡವನ್ನು ಬೆಸ್ಕಾಂ ಸಂಸ್ಥೆಗೆ ವಹಿಸಿಕೊಡಬಹುದಾಗಿದೆ ಎಂಬ ಕಾಮಗಾರಿ ಇಲಾಖೆಯಲ್ಲಿ ಅಭಿಪ್ರಾಯ ನೀಡಲಾಗಿದೆ.

ಸದರಿ ಸೂಚಿತ ಕಟ್ಟಡ ಉದ್ಯಾನವನದ ಒಳಗೆ ಇದ್ದು, ಸುಮಾರು ವರ್ಷಗಳಿಂದ ನಿರುಪಯುಕ್ತವಾಗಿರುವುದು ಕಂಡು ಬಂದಿದ್ದು, ಇದನ್ನು ಸಾರ್ವಜನಿಕರಿಗೆ ದೊರೆಯಬಹುದಾದ ಸೇವಾ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುವಂತಹ ಹಿತದೃಷ್ಟಿಯಲ್ಲಿ ಪಾಲಿಕೆಯ ಆಸ್ತಿ ವಿಭಾಗದ

ಅಭಿಪ್ರಾಯದ ಮೇರೆಗೆ ಸದರಿ ಸ್ವತ್ತು ಪಾಲಿಕೆಯ ಆಸ್ತಿಯಾಗಿದ್ದು, ಆಸ್ತಿ ಶಾಖೆಯ ದಾಖಲೆಗಳಂತೆ ತಾಳೆಯಾಗಿರುತ್ತದೆ. ಅದರಂತೆ ನಕ್ಷೆ ವರದಿಯನ್ನು ತಯಾರಿಸಿ, ಬೆಸ್ಕಾಂ ಕಛೇರಿಗೆ ಕಟ್ಟಡವನ್ನು ಗುತ್ತಿಗೆಗೆ ಕೋರಲಾಗಿರುವ ಸ್ವತ್ತು ವಾರ್ಡ್-110, ಸಂಪಂಗಿರಾಮನಗರ, **9ನೇ ಕ್ರಾಸ್, ಬನ್ನಪ್ಪ ಪಾರ್ಕ್‌ನಲ್ಲಿ ಬರುವ ಖಾಲಿ ಇರುವ ಬಿಬಿಎಂಪಿ ಕಟ್ಟಡದ ವಿಸ್ತೀರ್ಣ 630 ಚದರಡಿ ಜಾಗವಾಗಿರುತ್ತದೆ. ಈ ಸ್ವತ್ತು** ಆಸ್ತಿ ಶಾಖೆಯ ಆಸ್ತಿ ವಹಿ ಸಂಖ್ಯೆ:9 (ಹೊಸದು), ಪುಟ ಸಂಖ್ಯೆ:234 ರಲ್ಲಿ "ಕೆಂಪೇಗೌಡ ರಸ್ತೆಯಲ್ಲಿರುವ ಬನ್ನಪ್ಪ ಉದ್ಯಾನವನ" ಎಂಬುದಾಗಿ ದಾಖಲಾಗಿದ್ದು, ಈ ಜಾಗವು ಪಾಲಿಕೆಯ ಆಸ್ತಿಯಾಗಿರುತ್ತದೆ. ಈ ರೀತಿಯ ಪಾಲಿಕೆಯ ಆಸ್ತಿಯನ್ನು ಗುತ್ತಿಗೆಗೆ ನೀಡಬೇಕಾದಲ್ಲಿ ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ಪಾಲಿಕೆಯಲ್ಲಿ ಅಳವಡಿಸಿಕೊಂಡಿರುವ ನಿಯಮಗಳು ಈ ಕೆಳಕಂಡ ಕಾಯ್ದೆ ಅನ್ವಯ ಕ್ರಮವಹಿಸಬೇಕಾಗಿರುತ್ತದೆ ಎಂದು ಉಲ್ಲೇಖಿಸಲಾಗಿದೆ.

1. ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.
2. **ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-110, ಸಂಪಂಗಿರಾಮನಗರ, 9ನೇ ಅಡ್ಡರಸ್ತೆ ಬನ್ನಪ್ಪ ಪಾರ್ಕ್‌ನಲ್ಲಿ ಬರುವ ಕಟ್ಟಡದ ವಿಸ್ತೀರ್ಣ-630 ಚದರಡಿಗಳ ಅಳತೆಯ ಕಟ್ಟಡವನ್ನು ಗುತ್ತಿಗೆಗೆ ನೀಡಿದಲ್ಲಿ ಸರ್ಕಾರದ ರಾಜ್ಯಪತ್ರದ ಅಧಿಸೂಚನೆ ಸಂಖ್ಯೆ:ನೋ.ಮು./ಸಿ.ಎಸ್/19/2016-17, ಬೆಂಗಳೂರು ದಿನಾಂಕ:30-03-2017 ರಲ್ಲಿ ಸೂಚಿತ ಜಾಗ ಇರುವ ಪ್ರದೇಶಕ್ಕೆ ನಿರ್ದೇಶಿತವಾಗಿರುವ ದರಪಟ್ಟಿಯಂತೆ ಸದರಿ ಜಾಗದ ವಿಸ್ತೀರ್ಣ 630 ಚದರಡಿ 58.53 ಚ.ಮೀ ಗಳಾಗಿದ್ದು, ಚ.ಮೀ 1ಕ್ಕೆ ವಸತಿಗಾಗಿ ನಿವೇಶನ ದರ ರೂ.2,15,300/- ನಮೂದಾಗಿದ್ದು, ಇದಕ್ಕೆ ವಸತಿಯೇತರ ಉದ್ದೇಶಕ್ಕಾಗಿ ಶೇ 40% + ಮೂಲೆ ಸ್ಥಳ ಆಧಾರ ಶೇ 10% ಒಟ್ಟು ಶೇ 50% ರಷ್ಟು ಹೆಚ್ಚಿಸಲಾಗಿದ್ದು, ಇದರಿಂದ ಚ.ಮೀ 1ಕ್ಕೆ ರೂ.3,22,950/- ಆಗುತ್ತದೆ. ಹಾಗೆಯೇ ಕೆಂಪೇಗೌಡ ರಸ್ತೆಯಲ್ಲಿನ ಕಟ್ಟಡ ವಿಸ್ತೀರ್ಣದ ಚ.ಮೀ 1ಕ್ಕೆ ರೂ.1,50,000/- ಗಳ ದರ ನಿಗಧಿ ಆಗಿರುವ ಬಗ್ಗೆ ಮಾಹಿತಿ ಇದ್ದು, ಇದರಂತೆ ಪ್ರಸ್ತಾಪಿತ ಕಟ್ಟಡ ವಿಸ್ತೀರ್ಣ 630 ಚದರಡಿ= 57.60 ಚ.ಮೀ ಈ ವಿಸ್ತೀರ್ಣಕ್ಕೆ ಕಟ್ಟಡದ ಚಾಲ್ತಿ ದರ ಚ.ಮೀ 1ಕ್ಕೆ ರೂ.1,50,000/- ರಂತೆ ರೂ.86,40,000/- ಇದಕ್ಕೆ ಅವಕಾಶ ಮತ್ತು ಸಲಹೆ ಇರುವಂತೆ ಶೇ 68% ರಷ್ಟು ನಿಗಧಿಪಡಿಸಿ ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಾಗವನ್ನು ಬೆಸ್ಕಾಂ (ಪಶ್ಚಿಮ) 5ನೇ ಉಪ ವಿಭಾಗ, ಕಾರ್ಯಪಾಲಕ ಘಟಕ-15ರ ಕಛೇರಿ ಉಪಯೋಗಕ್ಕಾಗಿ ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ **ಮಾನ್ಯ ಆಯುಕ್ತರ ದಿನಾಂಕ: 07-12-2018ರ ಟಿಪ್ಪಣಿಯ ಕುರಿತಂತೆ ಹಾಜರಿದ್ದ ಅಧಿಕಾರಿಗಳೊಡನೆ ಚರ್ಚಿಸಿ, ಸದರಿ ಪ್ರಸ್ತಾವನೆಯನ್ನು ಒಪ್ಪುತ್ತಾ, ಬೆಸ್ಕಾಂ (ಪಶ್ಚಿಮ) 5ನೇ ವಿಭಾಗ, ಕಾರ್ಯ ಮತ್ತು ಪಾಲನ ಘಟಕ-15ರ ಕಛೇರಿಗೆ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಖಾಂತರ ಅಂತಿಮ ತೀರ್ಮಾನಕ್ಕಾಗಿ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು**

***ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05.02.2019ರ ಸಭೆಯ ನಿರ್ಣಯ.***

***ನಿರ್ಣಯ: ಸಂಬಂಧಪಟ್ಟ ಅಧಿಕಾರಿಗಳು ಗೈರುಹಾಜರಾಗಿದ್ದು ನಿಗಧಿಪಡಿಸಿರುವ ಗುತ್ತಿಗೆ ಮೊತ್ತವು ವಾರ್ಷಿಕವೇ ಅಥವಾ ಮಾಸಿಕವೇ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ, ಆದುದರಿಂದ ಸ್ಪಷ್ಟ ಮಾಹಿತಿಯೊಂದಿಗೆ ಸಮಿತಿಯ ಮುಂದೆ ಪುನರ್ ಮಂಡಿಸಲು ಕಡತವನ್ನು ಹಿಂದಿರುಗಿಸಿದೆ.***

## 271. ವಿಷಯದ ಸಂಖ್ಯೆ: ತೆಆಸ್ಥಾಸ/ 192 /2018-19

***ಆಯುಕ್ತರ ದಿನಾಂಕ:05-12-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ವಾರ್ಡ್ ಸಂಖ್ಯೆ:110, ಸ್ವತ್ತಿನ ಸಂಖ್ಯೆ:10/1, 8ನೇ ಎ ಮುಖ್ಯರಸ್ತೆ, ಸಂಪಂಗಿರಾಮನಗರ, ಬೆಂಗಳೂರು 72+70/2 x 74+50/2= 4402 ಚದರಡಿ ಜಾಗವನ್ನು ಮಾಸಿಕ ರೂ.100/- ಗಳಂತೆ ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಎಂಎ 263 ಎಂಎನ್‌ಜಿ 75 ದಿ:08-03-1977ರ ಸರ್ಕಾರದ ಆದೇಶದಂತೆ ದಿ:23-03-1977 ರಿಂದ 22-03-2012ರ ವರೆಗೆ ಪ್ರಾರ್ಥನ ಮಂದಿರಕ್ಕೆ ಗುತ್ತಿಗೆಗೆ ನೀಡಿದ್ದು, ಪುನ: 80 ವರ್ಷಗಳ ಅವಧಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಬೇಕೆಂದು ಕೋರಿರುತ್ತಾರೆ.*

*ವಲಯಾಧಿಕಾರಿಗಳು ನೀಡಿರುವ ವರದಿಯಂತೆ ಕನ್ಯಕಾ ಪರಮೇಶ್ವರಿ ದೇವಸ್ಥಾನ ನಿರ್ಮಿಸಲು ಗುತ್ತಿಗೆಗೆ ನೀಡಲಾಗಿದ್ದು, ಗುತ್ತಿಗೆ ಅವಧಿಯು ಮುಕ್ತಾಯವಾಗಿದ್ದು, ಗುತ್ತಿಗೆ ಮೊತ್ತವನ್ನು ಪೂರ್ಣವಾಗಿ ಪಾವತಿಸಿರುವುದಾಗಿ ವರದಿಸಿರುತ್ತಾರೆ.*

*ಪ್ರಸ್ತಾಪಿತ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ದಿ:01-07-2013ರ ಸುತ್ತೋಲೆಯಂತೆ ಯಾವುದೇ ಪಾಲಿಕೆಯ ಜಾಗವನ್ನು ಗುತ್ತಿಗೆ ನೀಡುವಾಗ ಸಾರ್ವಜನಿಕ ಹರಾಜು ಮೂಲಕವೇ ನೀಡಬೇಕೆಂದು ಆದೇಶಿಸಿದೆ. ಆದರೆ, ಇದು ದೇವಸ್ಥಾನವನ್ನೊಳಗೊಂಡ ಗುತ್ತಿಗೆ ಜಾಗವಾಗಿರುವುದರಿಂದ ಈ ಸುತ್ತೋಲೆಯಲ್ಲಿ ಕ್ರಮಗಳು ಈ ಪ್ರಕರಣಕ್ಕೆ ಅನ್ವಯವಾಗುವುದೇ ಎಂಬುದರ ಬಗ್ಗೆ ಆಸ್ತಿ ಶಾಖೆಗೆ ಕಡತ ಮಂಡಿಸಿರುತ್ತಾರೆ.*

*ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002 ಬೆಂಗಳೂರು ದಿನಾಂಕ:02-06-2003ರ ಮಾರ್ಗಸೂಚಿ ಕ್ರಮ ಸಂಖ್ಯೆ VI ರನ್ವಯ ಸಾರ್ವಜನಿಕ ಹರಾಜು ಮೂಲಕವೇ ಗುತ್ತಿಗೆ ನೀಡಬೇಕೆಂದಿರುತ್ತದೆ. ಆದರೆ, ಪ್ರಸ್ತಾಪಿತ ಗುತ್ತಿಗೆಯು ದೇವಸ್ಥಾನವಾಗಿರುವುದರಿಂದ ದಿನಾಂಕ:02-06-2003ರ ಮಾರ್ಗಸೂಚಿಗಳಿಂದ ವಿನಾಯಿತಿ ನೀಡುವ ಪ್ರಾಧಿಕಾರವು ಸರ್ಕಾರವಾಗಿರುತ್ತದೆ.*

*ಪ್ರಸ್ತಾಪಿತ ಸ್ವತ್ತಿನ ಅಳತೆ 4402 ಚದರಡಿಗಳಾಗಿದ್ದು, ದಿನಾಂಕ:28-03-2016ರ ಸರ್ಕಾರದ ಮಾರ್ಗಸೂಚಿ ದರದಂತೆ ಚದರ ಮೀಟರ್ ಒಂದಕ್ಕೆ ರೂ.75350 ಗಳಾಗಿದ್ದು, (75350/10.76=7003)*

*ಚದರಡಿ ಒಂದಕ್ಕೆ ರೂ.7003/- ಗಳಾಗುತ್ತದೆ. ಆಸ್ತಿಯ ವಿಸ್ತೀರ್ಣ 4402x ಮಾರ್ಗಸೂಚಿ ದರ ಚದರಡಿ ಒಂದಕ್ಕೆ 7003= ಸ್ವತ್ತಿನ ಒಟ್ಟು ಮೌಲ್ಯ ರೂ.3,08,27,206/- ಗಳಾಗುತ್ತದೆ. ವಾಣಿಜ್ಯಕ್ಕೆ ಶೇ 40% ರಷ್ಟು ಸೇರಿಸಿದ್ದಲ್ಲಿ, ರೂ.1,23,30,882/-ಗಳು ಸ್ವತ್ತಿನ ಒಟ್ಟು ಮೌಲ್ಯ (3,08,27,206+1,23,30,882= 4,31,58,088/-) ರೂ.4,31,58,088/- ಗಳಾಗುತ್ತದೆ. ಸ್ವತ್ತಿನ ಒಟ್ಟಾರೆ ಮೌಲ್ಯದ ಶೇ 10% ರಂತೆ ಪರಿಗಣಿಸಿದಲ್ಲಿ, ವಾರ್ಷಿಕ ರೂ.43,15,808/- ಗಳು ಹಾಗೂ ಮಾಸಿಕ ರೂ.3,59,651/- ಗಳಾಗುತ್ತದೆ.*

*ಗುತ್ತಿಗೆ ದರ ನಿಗಧಿಪಡಿಸಿ ಗುತ್ತಿಗೆ ಅವಧಿ (ಮುಗಿದ ದಿನಾಂಕದಿಂದ 30 ವರ್ಷಗಳ ಅವಧಿಗೆ) ನವೀಕರಿಸುವ ಬಗ್ಗೆ ಹಾಗೂ ಸಾರ್ವಜನಿಕ ಬಹಿರಂಗ ಹರಾಜು ಷರತ್ತಿನಿಂದ ವಿನಾಯಿತಿಗಾಗಿ ಸಮಿತಿಗಳು ಹಾಗೂ ಬಿಬಿಎಂಪಿ ಸಭೆ ಒಪ್ಪಿದಲ್ಲಿ, ಸಕ್ಷಮ ಪ್ರಾಧಿಕಾರವಾದ ಘನ ಸರ್ಕಾರದಲ್ಲಿ ಮಂಡಿಸಿ ಅನುಮೋದಿಸಿಕೊಳ್ಳಬೇಕಿರುತ್ತದೆ. ಈ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ*

ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬಿಬಿಎಂಪಿ ಸಭೆಯ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯ ದಿನಾಂಕ:21-06-2016 ರಂದು ನಡೆದ ಸಭೆಯ ನಡವಳಿಗಳ ವಿಷಯ ಸಂಖ್ಯೆ:ನಯೋಅಸ್ಥಾಸ/09/16-17 ರಲ್ಲಿ ಕೆಲವು ಮಾಹಿತಿಯನ್ನು ಕೋರಲಾಗಿದ್ದು, ಸದರಿ ಮಾಹಿತಿಗಳನ್ನು ವಲಯಾಧಿಕಾರಿಗಳು ಸಲ್ಲಿಸಿರುತ್ತಾರೆ. ಮಾಹಿತಿಯ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ನಗರ ಯೋಜನೆ ಅಭಿವೃದ್ಧಿಯವರು ಕೋರಿರುವ ಮಾಹಿತಿ | ಅರ್ಜಿದಾರರು ನೀಡಿರುವ ದಾಖಲೆಗಳು |
|---|---|---|
| 1 | ಶ್ರೀ.ವಾಸವಿ ಕನ್ಯಕಾ ಪರಮೇಶ್ವರಿ ಸಂಘ (ರಿ) ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳ ಲೆಕ್ಕಾ ಪರಿಶೋಧನ ವರದಿ | ಲೆಕ್ಕ ಪರಿಶೋಧನ ವರದಿಯನ್ನು ಕಡತದಲ್ಲಿ ಲಗತ್ತಿಸಿದೆ. |
| 2 | ಶ್ರೀ.ವಾಸವಿ ಕನ್ಯಕಾ ಪರಮೇಶ್ವರಿ ಸಂಘ (ರಿ) ನೋಂದಾಣಿ ಪ್ರತಿ, ಟ್ರಸ್ಟ್ ಪದಾಧಿಕಾರಿಗಳು ಮತ್ತು ಸದಸ್ಯರುಗಳ ವಿವರ | ನೋಂದಾಣಿ ಪ್ರಮಾಣಪತ್ರ ದಿನಾಂಕ: 01-12-2016 ರಂದು ಲಗತ್ತಿಸಿದೆ. |
| 3 | ಪಾಲಿಕೆ ಸ್ವತ್ತಿನಲ್ಲಿ ನಿರ್ಮಿಸಲಾಗಿರುವ ಕಟ್ಟಡಕ್ಕೆ ಅನುಮತಿ ಪಡೆಯಲಾಗಿದೆಯೇ? ಪಡೆದಿದ್ದಲ್ಲಿ ಅದರ ಪ್ರತಿಯನ್ನು ಒದಗಿಸುವುದು. | ಮಂಜೂರಾತಿ ನಕ್ಷೆಯಾಗಿರುವುದಿಲ್ಲ ಕಚ್ಚಾ ನಕ್ಷೆ ಲಗತ್ತಿಸಿದೆ. |

ಮುಂದುವರೆದು, ವಲಯಾಧಿಕಾರಿಗಳು ಸಲ್ಲಿಸಿರುವ ಮಾಹಿತಿಯನ್ನು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ **ಮಾನ್ಯ ಆಯುಕ್ತರ ಟಿಪ್ಪಣಿಯ ದಿನಾಂಕ: 05-12-2018ರ ಪ್ರಸ್ತಾಪಿತ ವಿಷಯದ ಬಗ್ಗೆ ಸಮಿತಿಯ ಸಭೆಯಲ್ಲಿ ಚರ್ಚಿಸಲಾಗಿ, ಈಗಾಗಲೇ ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆ ಅವಧಿಯನ್ನು ಮುಕ್ತಾಯದ ದಿನಾಂಕದಿಂದ 30 ವರ್ಷಗಳಿಗೆ ಮುಂದುವರೆಸಲು ಸರ್ಕಾರಕ್ಕೆ ಟಿಪ್ಪಣಿಯನ್ನು ಸಲ್ಲಿಸುವ ಕುರಿತಂತೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ & ಆರ್ಥಿಕ ಸ್ಥಾಯಿ ಸಮಿತಿಯ ಮುಖಾಂತರ ಪಾಲಿಕೆ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05.02.2019ರ ಸಭೆಯ ನಿರ್ಣಯ.**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05-02-2019ರ ನಿರ್ಣಯವನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 281. ವಿಷಯದ ಸಂಖ್ಯೆಃ ತೆಆಸ್ಥಾಸ/ 193 /2018-19

**ಆಯುಕ್ತರ ದಿನಾಂಕ:07-01-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಸರ್ಕಾರದ ಆದೇಶ ಸಂಖ್ಯೆ:7719-21 ಸಿಎಂ 12-53, ದಿ:03-10-1953 ರಂತೆ ಹಿಂದಿನ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೈಸೂರು ರಸ್ತೆ, ಗೋರಿಪಾಳ್ಯದಲ್ಲಿನ ನಗರಪಾಲಿಕೆಯ 60x40 ಅಡಿಗಳ ಸ್ವತ್ತನ್ನು ವಾರ್ಷಿಕ ಮೌಲ್ಯ ರೂ.6/- ಗಳಿಗೆ ಕಾರ್ಯದರ್ಶಿ, ಕಮ್ಯುನಿಟಿ ವೆಲ್‌ಫೇರ್ ಸೆಂಟರ್ ಇವರಿಗೆ ಗುತ್ತಿಗೆ ಆಧಾರದ ಮೇಲೆ 40-ವರ್ಷಗಳಿಗೆ ಗುತ್ತಿಗೆ ಷರತ್ತುಗಳನ್ವಯ ನೀಡಿದ್ದು, ಗುತ್ತಿಗೆ ಅವಧಿ 1997ಕ್ಕೆ ಮುಕ್ತಾಯವಾಗಿದ್ದು, ವಾರ್ಷಿಕ ಗುತ್ತಿಗೆ ರೂ.6/-ರಂತೆ 1999-2000ರ ಅವಧಿಯವರೆಗೆ ಬಾಡಿಗೆ ಪಾವತಿಸುವಂತೆ ವರದಿಯನ್ನು ಉಲ್ಲೇಖಿಸಲಾಗಿದೆ.

ಕಾರ್ಯದರ್ಶಿ, ಸಮಾಜ ಸೇವಾ ರವರು ದಿ:17-04-1999 ರಲ್ಲಿ ಪಾಲಿಕೆಗೆ ಮನವಿ ನೀಡಿ ಮೇಲ್ಕಂಡ ಪಾಲಿಕೆಯ ಗುತ್ತಿಗೆ ಸ್ವತ್ತಿನಲ್ಲಿ ದೇವಸ್ಥಾನ, ಕಛೇರಿ, ವಾಚನಾಲಯ ಹಾಗೂ ಅಂಗಡಿಗಳನ್ನು ಕಟ್ಟಿರುವ ಬಗ್ಗೆ ಉಲ್ಲೇಖಿಸಿ ಸದರಿ ಸೇವಾ ಸಂಸ್ಥೆಗೆ ಖಾತಾ ನೊಂದಾಯಿಸಿಕೊಡಲು ಮನವಿ ಸಲ್ಲಿಸಿದ್ದು, ಈ ಆಸ್ತಿ ಪಾಲಿಕೆಯದಾಗಿರುವುದರಿಂದ ಖಾತಾ ಪ್ರಕ್ರಿಯೆ ಬಗ್ಗೆ ದಾಖಲಿಸಿರುವುದಿಲ್ಲ.

ಇದು ಸಮಾಜ ಸೇವಾ ಸಂಸ್ಥೆ ಆಗಿರುವುದರಿಂದ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಾರ್ವಜನಿಕ ಉಪಯೋಗಕ್ಕಾಗಿ ಅನುಷ್ಠಾನಗೊಳಿಸಿರುವುದರಿಂದ ಗುತ್ತಿಗೆ ಅವಧಿಯನ್ನು1998ರಿಂದ ಮುಂದುವರೆಸಬೇಕಾಗಿರುತ್ತದೆ. ಆದರೆ, 1997 ರಿಂದ 2011 ರವರೆಗೆ ಸದರಿ ಸ್ವತ್ತಿಗೆ ಯಾವುದೇ ಸಂಸ್ಥೆಗಾಗಲೀ, ವ್ಯಕ್ತಿಗಾಗಲೀ ಯಾವುದೇ ಗುತ್ತಿಗೆಯಾಗಲಿ ಕ್ರಯ ನೀಡುವ ಪ್ರಕ್ರಿಯೆ ನಡೆದಿರುವುದಿಲ್ಲ.

ದಿ:02-09-2011ರಲ್ಲಿ ಸಹಾಯಕ ಆಯುಕ್ತರು(ಆಸ್ತಿಗಳು) ರವರು ಮತ್ತು ಭೂಮಾಪಕರು ಹಾಗೂ ಸಹಾಯಕ ಕಂದಾಯ ಅಧಿಕಾರಿ ಜೆ.ಜೆ.ಆರ್.ನಗರ ರವರೊಂದಿಗೆ ಸ್ಥಳ ಪರಿಶೀಲಿಸಲಾಗಿ, ಈ ಸಂಸ್ಥೆಗೆ ಈ ಹಿಂದೆಯೇ 60x40 ಅಡಿಗಳ ವಿಸ್ತೀರ್ಣದ ಪಾಲಿಕೆ ಜಾಗವನ್ನು ಸರ್ಕಾರದ ಆದೇಶದಂತೆ 40-ವರ್ಷಗಳಿಗೆ ಗುತ್ತಿಗೆಗೆ ನೀಡಿದ್ದು, 1997 ಕ್ಕೆ ಗುತ್ತಿಗೆ ಅವಧಿ ಮುಕ್ತಾಯವಾಗಿರುತ್ತದೆ. ಸದರಿ ಸ್ಥಳದಲ್ಲಿ 20x40 ಅಡಿಗಳ ವಿಸ್ತೀರ್ಣಕ್ಕೆ ಸಿದ್ಧಿವಿನಾಯಕ ದೇವಸ್ಥಾನದ ಕಟ್ಟಡವಿರುತ್ತದೆ. ಈ ಕಟ್ಟಡಕ್ಕೆ ಹೊಂದಿಕೊಂಡಂತೆ 10x10 ಅಡಿಗಳ ವಿಸ್ತೀರ್ಣದಲ್ಲಿ 4 ಅಂಗಡಿಗಳು ಬಾಡಿಗೆಗೆ ನೀಡಿದ್ದು ಕಂಡುಬಂದಿರುತ್ತದೆ. ಸದರಿ ಅಂಗಡಿಗಳ ಹಿಂಭಾಗದಲ್ಲಿ ದೇವಸ್ಥಾನದ ಅರ್ಚಕರಿಗೆ 10x15 ಅಡಿಗಳಲ್ಲಿ ವಾಸಕ್ಕೆ ಮನೆ ಮಾಡಿಕೊಟ್ಟಿರುತ್ತಾರೆ ಹಾಗೂ ಒಂದು ಚಿಕ್ಕ ಗ್ರಂಥಾಲಯ ಸಹ ಮಾಡಿರುತ್ತಾರೆ.

ಮೇಲ್ಕಂಡ ಗುತ್ತಿಗೆ ನೀಡಿರುವ ಪಾಲಿಕೆಯ ಜಾಗದಲ್ಲಿ ದೇವಸ್ಥಾನ ಮತ್ತು ಅಂಗಡಿಗಳು ಹೊಂದಿಕೊಂಡಂತೆ ಅಂಗಡಿಗಳ ಹಿಂಭಾಗದಲ್ಲಿ ಖಾಲಿ ಜಾಗವಿರುತ್ತದೆ. ಈ ಅಂಗಡಿಗಳಿಂದ ಬರುವ ಆದಾಯದಿಂದ ದೇವಸ್ಥಾನದಲ್ಲಿ ದಿನನಿತ್ಯ ಪೂಜಾ ಕಾರ್ಯಕ್ರಮಗಳನ್ನು ಹಾಗೂ ದೇವಸ್ಥಾನದ ಅಭಿವೃದ್ಧಿಗಾಗಿ ಬಳಸುತ್ತಿರುವುದನ್ನು ತಿಳಿಸಿರುತ್ತಾರೆ ಹಾಗೂ 2006-07 ರಿಂದ 2008-09 ಸಂಸ್ಥೆಯ ಆಡಳಿತ ಮಂಡಳಿಯ ವಾರ್ಷಿಕ ವರದಿ ಜಮಾ ಖರ್ಚುಗಳು ಮಾಹಿತಿಯು ಜೆರಾಕ್ಸ್ ಪ್ರತಿಗಳನ್ನು ನೀಡಿರುತ್ತಾರೆ.

ತದನಂತರ ದಿ:07-09-2011 ರಲ್ಲಿ ಸದರಿ ಸಮಾಜ ಸೇವಾ ನಿಲಯ (ರಿ) ರವರು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದು, ಗುತ್ತಿಗೆ ಅವಧಿಯನ್ನು ಮುಂದುವರಿಸಿಕೊಡುವಂತೆ ಕೋರಿರುವ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರು(ಬಿಬಿಎಂಪಿ) ರವರ ಆದೇಶ ಸಂಖ್ಯೆ:ಎಸಿ3(1)/ಪಿಆರ್/13/11-12ರ ದಿ:20-09-2011 ರಂತೆ ಆದೇಶ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:ತೆ.ಆ.ಸ್ಥಾ.ಸ/367/2011-12, ದಿ:19-11-2011ರ ಸಭೆಯ ನಡುವಳಿಯ ಆದೇಶ ಹಾಗೂ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಸಮಿತಿಯ ವಿಷಯ ಸಂಖ್ಯೆ:ನಯೋ.ಅ.ಸ್ಥಾ.ಸ/1222/11-12, ದಿ:18-11-2011 ರಂದು ನಡೆದ ಸಭೆಯ ನಡುಗಳಿಗಳು ಹಾಗೂ ಪೂಜ್ಯ ಮಹಾಪೌರರು(ಬಿಬಿಎಂಪಿ) ರವರ ವಿಷಯದ ಸಂಖ್ಯೆ:25(265)2011-12ರ ದಿ:27-12-2011 ರಂದು ಪಾಲಿಕೆಯ ಸಭೆಯಲ್ಲಿ ತೀರ್ಮಾನದ ವಿಷಯದ ಆದೇಶದ ಮೇರೆಗೆ ಗುತ್ತಿಗೆ ಅವಧಿಯನ್ನು 5-ವರ್ಷಗಳಿಗೆ ಮುಂದುವರೆಸಿ ಮಾಸಿಕ ರೂ.1000/-(ಒಂದು ಸಾವಿರ ರೂ.ಗಳಂತೆ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿಯ ದಿ:19-11-2011ರ ನಿರ್ಣಯವನ್ನು ಒಪ್ಪಿರುವ ಹಿನ್ನೆಲೆಯಲ್ಲಿ ಸದರಿ ಕಮ್ಯುನಿಟಿ ವೆಲ್‌ಫೇರ್ ಸೆಂಟರ್‌ರವರಿಗೆ ದಿ:26-12-2012 ರಂದು ಗುತ್ತಿಗೆ ಕರಾರು ಪ್ರತಿಯನ್ನು ನೊಂದಾಯಿಸಿಕೊಡಲಾಗಿರುತ್ತದೆ.

ತದನಂತರ, ಸದರಿ ಸ್ವತ್ತಿನ ಗುತ್ತಿಗೆ ಅವಧಿಯು ದಿ:26-11-2017ಕ್ಕೆ ಮುಕ್ತಾಯಗೊಂಡಿರುತ್ತದೆ. ಕಾರ್ಯದರ್ಶಿ ಕಮ್ಯುನಿಟಿ ವೆಲ್‌ಫೇರ್ ಸೆಂಟರ್ ರವರು ಸದರಿ ಸ್ವತ್ತಿಗೆ ಗುತ್ತಿಗೆ ಅವಧಿಯನ್ನು ಮುಂದುವರೆಸಿಕೊಡುವಂತೆ ದಿ:19-09-2017 ರಂದು ಮನವಿ ಪತ್ರ ಸಲ್ಲಿಸಿರುತ್ತಾರೆ ಹಾಗೂ ದಿ:25-10-2017 ರಂದು ವಾರ್ಡ್ ನಂ:137ರ ನಗರಪಾಲಿಕೆ ಸದಸ್ಯರಾದ ಶ್ರೀಮತಿ ಜಿ.ವಿ.ಶಶಿಕಲಾ ರವರು ಕಾರ್ಯದರ್ಶಿ, ಕಮ್ಯುನಿಟಿ ವೆಲ್‌ಫೇರ್ ಸೆಂಟರ್ ರವರಿಗೆ ಗುತ್ತಿಗೆ ಅವಧಿಯನ್ನು ಮುಂದುವರೆಸಿಕೊಡುವಂತೆ ಶಿಫಾರಸ್ಸು ಮನವಿ ಪತ್ರ ಸಲ್ಲಿಸಿರುತ್ತಾರೆ.

ಮೇಲ್ಕಂಡ ಆದೇಶಗಳನ್ವಯ ಸದರಿ ಕಮ್ಯುನಿಟಿ ವೆಲ್‌ಫೇರ್ ಸೆಂಟರ್ (ಕಾರ್ಯದರ್ಶಿ) ರವರು ಗುತ್ತಿಗೆ ಮೊತ್ತವನ್ನು ಸಹ ಪಾವತಿಸಿದ್ದು, ಹಾಗೂ ಮುಂಗಡ ಗುತ್ತಿಗೆ ಮೊತ್ತವನ್ನು ಸಹ ಪಾವತಿಸಿದ್ದು, ಪಾವತಿಸಿದ ರಸೀದಿಗಳ ನಕಲು ಪ್ರತಿಗಳನ್ನು ಕಡತದಲ್ಲಿ ಲಗತ್ತಿಸಿದೆ.

ಮೇಲ್ಕಂಡ ಸಮಾಜ ಸೇವಾ ನಿಲಯದ ಆವರಣದಲ್ಲಿ ಹಿಂದೆ 2011 ರಲ್ಲಿ ಇರುವಂತೆ ಕಟ್ಟಡಗಳು ಇರುತ್ತವೆ. ಈ ಸ್ವತ್ತು ಸಾರ್ವಜನಿಕರ ಉಪಯೋಗಕ್ಕಾಗಿ ಹಿಂದೂ ಧಾರ್ಮಿಕ ಅಭಿವೃದ್ಧಿಗಾಗಿ ಉಪಯೋಗಿಸುತ್ತಿದ್ದು, ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ **ಮಾನ್ಯ ಆಯುಕ್ತರ ದಿನಾಂಕ: 07.01.2019ರ ಟಿಪ್ಪಣಿಯ ಕುರಿತಂತೆ ಹಾಜರಿದ್ದ ಅಧಿಕಾರಿಗಳೊಡನೆ ಚರ್ಚಿಸಿ, ಕಾರ್ಯದರ್ಶಿ ಕಮ್ಯೂನಿಟಿ ವೆಲ್‌ಫೇರ್ ಸೆಂಟರ್‌ರವರಿಗೆ ಈ ಹಿಂದೆ ಗುತ್ತಿಗೆ ಅವಧಿ ಮುಕ್ತಾಯವಾದ ದಿನಾಂಕದಿಂದ ಮುಂದಿನ 5 ವರ್ಷಗಳಿಗೆ ಗುತ್ತಿಗೆ ಅವಧಿಯನ್ನು ನವೀಕರಿಸುವ ಸಂಬಂಧ ಅಂತಿಮ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಖಾಂತರ ಪಾಲಿಕೆ ಸಭೆಯ ಮುಂದೆ ಮಂಡಿಸಲು ತೀಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05.02.2019ರ ಸಭೆಯ ನಿರ್ಣಯ.**

ನಿರ್ಣಯ: **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05-02-2019ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.2000/- (ಎರಡು ಸಾವಿರ ಮಾತ್ರ)ಗಳಿಗೆ ಗುತ್ತಿಗೆಯನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

**ಹೆಚ್ಚುವರಿ ವಿಷಯಗಳುಃ-**

**291. ವಿಷಯದ ಸಂಖ್ಯೆಃ ತೆಆಸ್ಥಾಸ/ 194 /2018-19**

**ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ,** ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಎಂಡೋಕ್ರೈನಾಲಜಿ ಅಂಡ್ ರಿಸರ್ಚ್ (ರಿ), ಬನ್ನೇರುಘಟ್ಟ ರಸ್ತೆ, 9ನೆ ಬ್ಲಾಕ್, ಜಯನಗರ ಬೆಂಗಳೂರು-560069 ರವರು 2018-19ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ.100.00 (ಒಂದು ನೂರು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 3415, ಪುಟ ಸಂಖ್ಯೆ 34 ರಲ್ಲಿ ಮೊತ್ತ ರೂ.100.00 (ಒಂದು ನೂರು) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ ಸಹಾಯಧನ ಬಿಡುಗಡೆ ಮಾಡುವ ವಿಷಯದಲ್ಲಿ ದಾಖಲಾತಿಗಳನ್ನು ಒದಗಿಸಲು ತಿಳುವಳಿಕೆ ಪತ್ರ ನೀಡಲಾಗಿರುತ್ತದೆ. ಪರಿಶೀಲಿಸಲಾಗಿ ಸದರಿ ಸಂಸ್ಥೆಯ

ಇರುವಿಕೆ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರ ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹೊರತು ಪಡಿಸಿ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ ಕೌಕಾ/ಪಿಆರ್/179/16-17, ದಿನಾಂಕ: 25-04-2016 ರಂತೆ ಕಾರ್ಯಕ್ರಮಕ್ಕೆ ತಗಲುವ ಅಂದಾಜು ವೆಚ್ಚದ ಪಟ್ಟಿ, ಕಾರ್ಯಕ್ರಮದ ವರದಿ, ಅಫಿಡವಿಟ್‌ಗಳನ್ನು ಹೊರತು ಪಡಿಸಿ ಉಳಿದ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಈ ಅಂಶಗಳನ್ನು ತಮ್ಮ ಗಮನಕ್ಕೆ ಈ ಮೂಲಕ ತರಲಾಗಿದೆ.

ಅದಾಗಿಯು 2018-19ನೇ ಸಾಲಿನ ಆಯವ್ಯಯದಲ್ಲಿ ಸದರಿ ಸಂಸ್ಥೆಯವರಿಗೆ ಮೀಸಲಿಟ್ಟಿರುವ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಆದೇಶ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರು ಪ್ರಸ್ತಾಪಿಸಿರುವ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 301. ವಿಷಯದ ಸಂಖ್ಯೆ: ತೆಆಸ್ಥಾಸ/ 195 /2018-19

**ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ದಿನಾಂಕ: 13-02-2019ರಂದು ನಡೆದ ವಿಷಯಗಳ ಸಭೆಯಲ್ಲಿ ಕೈಗೊಂಡ ನಿರ್ಣಯ:-** 18 ಶಿಕ್ಷಣ, 2018-19ನೇ ಸಾಲಿನ ಆಯವ್ಯಯದಲ್ಲಿ ಪಿ-ಕೋಡ್ ಸಂಖ್ಯೆ-ಪಿ1590 ಲೆಕ್ಕ ಶೀರ್ಷಿಕೆ "ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ" ರೂ.125.00 ಲಕ್ಷಗಳನ್ನು ಮೀಸಲಿರಿಸಿರುವ ಅನುದಾನವನ್ನು 2018-19ನೇ ಸಾಲಿನಲ್ಲಿ ಈ ಕೆಳಕಂಡ ಶಾಲಾ/ಕಾಲೇಜುಗಳಲ್ಲಿ ಪ್ರಥಮ ಬಾರಿಗೆ **ಸ್ಮಾರ್ಟ್ ಐಡಿ ಕಾರ್ಡ್ ಫಾರ್ ಸ್ಟೂಡೆಂಟ್ಸ್** (Smart ID Card for Students) ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಐಡಿ ಕಾರ್ಡ್‌ಗಳನ್ನು ವಿತರಣೆ ಮಾಡಲು, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧವಾಗಿ ಹಾಗೂ ತುರ್ತಾಗಿ ಕಾರ್ಯ ರೂಪಕ್ಕೆ ತರಲು, 4ಜಿ ವಿನಾಯ್ತಿ ಪಡೆದಿರುವ ಮೆ:ಕಿಯೋನಿಕ್ಸ್ ಜಾಬ್ ಸಂಕೇತವನ್ನು ನೀಡಲು ಮುಖ್ಯ ಆರ್ಥಿಕ ಅಧಿಕಾರಿಯವರಿಗೆ ಸೂಚಿಸಲು ಸಮಿತಿಯಲ್ಲಿ ಚರ್ಚಿಸಿ ಸರ್ವಾನುಮತದಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ತೀರ್ಮಾನಿಸಲಾಯಿತು.

| ಕ್ರ.ಸ | ಲೆಕ್ಕ ಶೀರ್ಷಿಕೆ | ಪಿ-ಕೋಡ್ | ರೂ. (ಲಕ್ಷಗಳಲ್ಲಿ) |
|---|---|---|---|
| 1 | ಸ್ಮಾರ್ಟ್ ಐಡಿ ಕಾರ್ಡ್ ಫಾರ್ ಸ್ಟೂಡೆಂಟ್ಸ್ (Student Smart ID Cardwith inbuild features) ಬಿಬಿಎಂಪಿ ಪ್ರೌಢ ಶಾಲೆ ಮತ್ತು ಪಿ.ಯು.ಸಿ ಕಾಲೇಜ್, ಚಾಮರಾಜಪೇಟೆ. | P-1590 | 65.00 |
| 2 | ಸ್ಮಾರ್ಟ್ ಐಡಿ ಕಾರ್ಡ್ ಫಾರ್ ಸ್ಟೂಡೆಂಟ್ಸ್ (Student Smart ID Card with inbuild features) ಬಿಬಿಎಂಪಿ ಪ್ರೌಢ ಶಾಲೆ ಮತ್ತು ಪಿ.ಯು.ಸಿ ಕಾಲೇಜ್, ಪಾದರಾಯನಪುರ. | P-1590 | 60.00 |

**ನಿರ್ಣಯ: ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 13-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 311. ವಿಷಯದ ಸಂಖ್ಯೆ: ತೆಆಸ್ಥಾಸ/ 196 /2018-19

**ಪ್ರಧಾನ ಅಭಿಯಂತರರ ದಿನಾಂಕ:23-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** 2017-18ನೇ ಸಾಲಿನ ಪಾಲಿಕೆಯ ರಾಜರಾಜೇಶ್ವರಿನಗರ ವಲಯದ ಜೆ.ಪಿ ಪಾರ್ಕ್ ವಾರ್ಡ್ ಸಂಖ್ಯೆ:17 ರ ವ್ಯಾಪ್ತಿಯಲ್ಲಿ 14ನೇ ಹಣಕಾಸು ಆಯೋಗದ ಲೆಕ್ಕ ಶೀರ್ಷಿಕೆ ಪಿ-3295 ರ ಅನುದಾನದ ಅಡಿಯಲ್ಲಿ ಅಳವಡಿಸಿಕೊಂಡು 2018-19ನೇ ಸಾಲಿನ ಆಯವ್ಯಯದಲ್ಲಿ ಜಾಬ್ ಸಂಖ್ಯೆ ನೀಡಲು ಹಾಗೂ ಕ್ರಿಯಾ ಯೋಜನೆ ಅನುಮೋದನೆಗೆ ಮುಖ್ಯ ಅಭಿಯಂತರರು (ರಾಜರಾಜೇಶ್ವರಿನಗರ ವಲಯ) ಪ್ರಸ್ತಾವನೆ ಸಲ್ಲಿಸಿದ್ದು, ಕಾಮಗಾರಿಯ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಕಾಮಗರಿಗಳ ವಿವರ | ಅಂದಾಜು ಪಟ್ಟಿ (ರೂ.ಲಕ್ಷಗಳಲ್ಲಿ) |
|---|---|---|
| 1 | UGD Works in Muthyala Nagar & Gokula in Ward No.17 JP Park. | 50.00 |

*ಮುಖ್ಯ ಆರ್ಥಿಕ ಅಧಿಕಾರಿಗಳು ರವರು ಅನುದಾನ ಲಭ್ಯತೆಯ ಬಗ್ಗೆ ವರದಿ ಮಾಡಿರುವಂತೆ, 2017–18 ರ ಆಯವ್ಯಯದ 14ನೇ ಹಣಕಾಸು ಆಯೋಗದ ಅನುದಾನದ ಲೆಕ್ಕ ಶೀರ್ಷಿಕೆ ಪಿ–3295 ರ ಅಡಿ ರೂ.4000.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, 2017–18ರಲ್ಲಿ ಪಿ–3295ರ ಅಡಿ ರೂ.3673.65 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿದೆ, 2017–18ರ ಪಿ–3295ರ ಅಡಿ ವಾರ್ಡ್ ಸಂಖ್ಯೆ:17 ಕ್ಕೆ ರೂ.50.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ಜಾಬ್ ಸಂಖ್ಯೆ ಪಡೆದಿರುವುದಿಲ್ಲ, ಸರ್ಕಾರದ ಅನುದಾನವನ್ನು ಸದುಪಯೋಗಪಡಿಸಿಕೊಳ್ಳಬೇಕಿದ್ದು, 2017–18ರ ಪಿ–3295ರ ಅಡಿ ವಾರ್ಡ್‌ಗೆ ನಿಗಧಿಪಡಿಸಿರುವ ರೂ.50.00 ಲಕ್ಷಗಳ ಅನುದಾನವನ್ನು 2018–19 ರ ಪಿ–3295ಗೆ ಹೊಂದಾಣಿಕೆ ಮಾಡಕೊಂಡು ಜಾಬ್ ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮತಿ ಮುಂದೆ ಮಂಡಿಸಲು ಅಭಿಪ್ರಾಯಿಸಿದ್ದು ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಪ್ರಸ್ತಾವನೆಯ ಸೂಕ್ತ ತೀರ್ಮಾನಕ್ಕಾಗಿ ಟಿಪ್ಪಣಿಯೊಂದಿಗೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.*

*ಈ ಹಿನ್ನೆಲೆಯಲ್ಲಿ, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಆದೇಶಿಸಿದಂತೆ 2017–18ನೇ ಸಾಲಿನಲ್ಲಿ ನಿಗಧಿಪಡಿಸಿದ ಅನುದಾನಕ್ಕೆ ಮೇಲ್ಕಾಣಿಸಿದ ಕಾಮಗಾರಿಯ ಅಂದಾಜು ಮೊತ್ತವಾದ ರೂ.50.00 ಲಕ್ಷಗಳನ್ನು 2018–19ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–3295 ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳ ಅಡಿಯಲ್ಲಿ ಅಳವಡಿಸಿಕೊಂಡು ಜಾಬ್ ಕೋಡ್ ನೀಡಲು ಹಾಗೂ ಸದರಿ ಕಾಮಗಾರಿಯ ಅಂದಾಜು ಮೊತ್ತವಾದ ರೂ.50.00 ಲಕ್ಷಗಳ ಕಾಮಗಾರಿಗೆ ಕ್ರಿಯಾ ಯೋಜನೆ ಅನುಮೋದನೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.*

***ನಿರ್ಣಯ: ದಿನಾಂಕ: 23–02–2019ರ ಪ್ರಧಾನ ಅಭಿಯಂತರರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## *321. ವಿಷಯದ ಸಂಖ್ಯೆ: ತೆಆಸ್ಥಾಸ/ 200 /2018–19*

***ಪ್ರಧಾನ ಅಭಿಯಂತರರ ದಿನಾಂಕ: 22–12–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ) ರವರು* Providing chain link fencing to SWD, ward No: 69 R.R.Nagara one *ಕಾಮಗಾರಿಗೆ ರೂ. 10.00ಲಕ್ಷಗಳ ಮೊತ್ತಕ್ಕೆ 2017–18ನೇ ಸಾಲಿನ 14ನೇ ಹಣಕಾಸು ಆಯೋಗದಲ್ಲಿ ಲೆಕ್ಕ ಶೀರ್ಷಿಕೆ ಪಿ–3297ರ ಅಡಿಯಲ್ಲಿ ಅನುವು ಮಾಡಲಾಗಿದ್ದು, ಸದರಿ ಕಾಮಗಾರಿಗೆ ಜಾಬ್ ಕೋಡ್ ನೀಡಲು ಕೋರಿದ್ದು ಮತ್ತು ಮುಖ್ಯ ಆರ್ಥಿಕ ಅಧಿಕಾರಿ ರವರು ಜಾಬ್ ಸಂಖ್ಯೆ ನೀಡಲು* System software*ನ್ನು ಬ್ಲಾಕ್ ಮಾಡಿರುವುದರಿಂದ ಅಭಿಪ್ರಾಯ ನೀಡಿದ್ದು ಮತ್ತು ಮುಖ್ಯ ಲೆಕ್ಕಾಧಿಕಾರಿ ರವರು 2018–19ನೇ ಸಾಲಿನ ಆಯವ್ಯದಲ್ಲಿ ಲೆಕ್ಕ ಶೀರ್ಷಿಕೆ ಪಿ–3297ರ ಅಡಿಯಲ್ಲಿ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್ ಸಂಖ್ಯೆ ನೀಡಲು ವರದಿ ಮಂಡಿಸಿರುತ್ತಾರೆ. ಮುಖ್ಯ ಆರ್ಥಿಕ ಅಧಿಕಾರಿರವರು ಸದರಿ ಕಾಮಗಾರಿಗೆ ಜಾಬ್ ಕೋಡ್ ನೀಡಲು ಸಮಿತಿಗೆ ಮಂಡಿಸಲು ವರದಿ ಮಂಡಿಸಿರುತ್ತಾರೆ.*

*ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರು ಆದೇಶಿಸಿರುವಂತೆ ಬೃಹತ್ ನೀರುಗಾಲುವೆ ಶಾಖೆಯಲ್ಲಿ ಕೈಗೊಳ್ಳಬೇಕಾದ ಕಾಮಗಾರಿಯಾದ* Providing chain link fencing to SWD, ward No: 69 R.R.Nagara one *ಕಾಮಗಾರಿಗೆ ರೂ. 10.00 ಲಕ್ಷಗಳ ಮೊತ್ತವನ್ನು 2018–19ನೇ ಸಾಲಿನ ಲೆಕ್ಕ*

*ಶೀರ್ಷಿಕೆ ಪಿ–2397ರ ಅಡಿಯಲ್ಲಿ ಮರು ಹೊಂದಾಣಿಕೆ ಮಾಡಲು ಅನುಮೋದನೆ ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ* ***ಪ್ರಧಾನ ಅಭಿಯಂತರರು (ಪ್ರಭಾರ) ರವರ ದಿನಾಂಕ: 22–12–2018ರ ಟಿಪ್ಪಣಿಯಲ್ಲಿನ ವಿಷಯವು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವ್ಯಾಪ್ತಿಗೆ ಒಳಪಡುವುದರಿಂದ, ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕೆ ಕಳುಹಿಸಿಕೊಡುವುದೆಂದು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 08.02.2019ರ ಸಭೆಯ ನಿರ್ಣಯ.***

***ನಿರ್ಣಯ: ಪ್ರಧಾನ ಅಭಿಯಂತರರು (ಪ್ರಭಾರ)ರವರ ದಿನಾಂಕ: 22–12–2018ರ ಟಿಪ್ಪಣಿ ಹಾಗೂ ದಿನಾಂಕ: 08–02–2019ರ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## *33]. ವಿಷಯದ ಸಂಖ್ಯೆಃ ತೆಆಸ್ಥಾಸ/ 201 /2018–19*

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 19–01–2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಭಾರತ ಜ್ಞಾನಾಭಿವೃದ್ಧಿ ಟ್ರಸ್ಟ್ (ನೋಂ), ನಂ.34, 2ನೇ ತಿರುವು, ಕುರುಬರಹಳ್ಳಿ ಮುಖ್ಯರಸ್ತೆ, ಬೆಂಗಳೂರು–560086 ರವರು 2018–19ನೇ ಸಾಲಿನ ರೂ.10.00 (ಹತ್ತು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018–19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್–1ರ ಪಿಕೋಡ್ 048, ಅನುಬಂಧ–04ರಲ್ಲಿ, ಕ್ರಮ ಸಂಖ್ಯೆ 129 ರಲ್ಲಿ ಮೊತ್ತ ರೂ.10.00 (ಹತ್ತು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.*

*ಈ ಸಂಬಂಧವಾಗಿ ಭಾರತ ಜ್ಞಾನಾಭಿವೃದ್ಧಿ ಟ್ರಸ್ಟ್ (ನೋಂ), 2018–19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018–19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ.10.00 (ಹತ್ತು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 19–01–2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## *34]. ವಿಷಯದ ಸಂಖ್ಯೆಃ ತೆಆಸ್ಥಾಸ/ 202 /2018–19*

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 19–01–2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಶ್ರೀ ಚಾಮುಂಡೇಶ್ವರಿ ಗ್ಲೋಬಲ್ ಎಜುಕೇಷನ್ ಸೆಂಟರ್ (ರಿ) ನಂ.173, 6ನೇ ಕ್ರಾಸ್, ಲಗ್ಗೆರೆ, ಬೆಂಗಳೂರು–560058 ರವರು 2018–19ನೇ ಸಾಲಿನ ರೂ.3.00 (ಮೂರು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಈ ಸಂಬಂಧ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರಿಗೆ 2018–19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್–1ರ ಪಿಕೋಡ್ 048, ಅನುಬಂಧ–04ರಲ್ಲಿ, ಕ್ರಮ ಸಂಖ್ಯೆ 171 ರಲ್ಲಿ ಮೊತ್ತ ರೂ.3.00 (ಮೂರು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.*

ಈ ಸಂಬಂಧವಾಗಿ ಶ್ರೀ ಚಾಮುಂಡೇಶ್ವರಿ ಗ್ಲೋಬಲ್ ಎಜುಕೇಷನ್ ಸೆಂಟರ್ (ರಿ) 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3ವರ್ಷದ ಲೆಕ್ಕಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ.3.00 (ಮೂರು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 19-01-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 351. ವಿಷಯದ ಸಂಖ್ಯೆ: ತೆಆಸ್ಥಾಸ/ 203 /2018-19

**ಆಯುಕ್ತರ ದಿನಾಂಕ:17-12-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ವಾರ್ಡ್ ನಂ:74, ಕಮಲಾನಗರ, ಶಂಕರನಾಗ್ ಬಸ್ ನಿಲ್ದಾಣ, ಶ್ರೀ.ರಾಮಯ್ಯ ರವರು ಮೀನು ಉಪಹಾರ ಪೆಟ್ಟಿಗೆ ಅಂಗಡಿ ಇಟ್ಟುಕೊಳ್ಳಲು ಕೋರಿರುತ್ತಾರೆ. ಸದರಿ ಪ್ರಸ್ತಾಪಿತ ಸ್ವತ್ತು ಕಮಲಾನಗರದ ಶಂಕರ್‌ನಾಗ್ ಬಸ್ ನಿಲ್ದಾಣದ **ಸಾರ್ವಜನಿಕ ಶೌಚಾಲಯ ಹಾಗೂ ಇಂದಿರಾ ಕ್ಯಾಂಟೀನ್ ಮಧ್ಯಭಾಗದಲ್ಲಿ ಬರುವ ಜಾಗವಾಗಿರುತ್ತದೆ.** ಆಸ್ತಿ ಶಾಖೆಯ ಆಸ್ತಿ ವಹಿ ಪರಿಶೀಲಿಸಲಾಗಿ, ಹೊಸ ಪುಸ್ತಕ ಸಂಖ್ಯೆ:18, ಪುಟ ಸಂಖ್ಯೆ:12 ರಲ್ಲಿ ದಾಖಲಿರುತ್ತದೆ. ಸದರಿ ಸ್ವತ್ತು ಪಾಲಿಕೆಯ ಆಸ್ತಿಯಾಗಿರುತ್ತದೆ. ಆದರೆ, ಪಾಲಿಕೆಯ ಆಸ್ತಿಯನ್ನು ಗುತ್ತಿಗೆ/ಕ್ರಯಕ್ಕೆ ನೀಡಬೇಕಾದಲ್ಲಿ ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ಪಾಲಿಕೆಯಲ್ಲಿ ಅಳವಡಿಸಿಕೊಂಡಿರುವ ನಿಯಮಗಳು ಈ ಕೆಳಕಂಡ ಕಾಯ್ದೆ ಅನ್ವಯ ಕ್ರಮವಹಿಸಬೇಕಾಗಿರುತ್ತದೆ.

1. ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.
2. **ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**

   ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

   No movable property exceeding such sum in value as may be prescribed shall be sold otherwise than by public auction;
   No property whether movable or immovable of whatever value shall be transferred free of cost or for an upset price;
   no lease of any immovable property exceeding five years shall be granted;
   no immovable property shall be disposed of by sale or by other transfer;
   Except with the previous sanction of the Government. ಎಂದಿರುತ್ತದೆ.

*ತದನಂತರ ಕಡತವನ್ನು ಸಹಾಯಕ ಕಂದಾಯ ಅಧಿಕಾರಿ (ಮಹಾಲಕ್ಷ್ಮೀಪುರ) ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಸದರಿ ಸ್ಥಳದ ಮಾರುಕಟ್ಟೆ ದರವನ್ನು ಸರ್ಕಾರದ ಮಾರ್ಗಸೂಚಿಯಂತೆ ಚ.ಮೀ ಒಂದಕ್ಕೆ ರೂ.29600/- ಗಳನ್ನು ನೊಂದಣಿ ಮತ್ತು ಮುದ್ರಾಂಕ ಇಲಾಖೆ ಅಧಿಸೂಚನೆ ಸಂಖ್ಯೆ:ನೋ.ಮು/ಸಿಎಸಿ/19/2016-17 ಬೆಂಗಳೂರು ದಿನಾಂಕ:30-03-2017 ರಂತೆ ಪುಟ ಸಂಖ್ಯೆ:3ರ ದೃಢೀಕೃತ ಪಟ್ಟಿಯನ್ನು ಲಗತ್ತಿಸಿರುತ್ತಾರೆ.*

*ಸದರಿ ಜಾಗವು ಶಂಕರ್‌ನಾಗ್ ಬಸ್ ನಿಲ್ದಾಣ ವ್ಯಾಪ್ತಿಯಲ್ಲಿ ಬರುವುದರಿಂದ ರೂ.29,600/- ಚ.ಮೀ ಗಳ ದರವೆಂದು ದೃಢಪಟ್ಟಿದ್ದು, 10x10=100 ಚ.ಅಡಿ 9.30 ಚ.ಮೀ 9.30x29600=275280/- ಗಳ ದರವಾಗಿದ್ದು, ಅದರಂತೆ ಶೇ 10% 275280/- ರಂತೆ ಒಟ್ಟು ರೂ.27528/- ಗಳ ವಾರ್ಷಿಕ ನೆಲ ಬಾಡಿಗೆ ದರವನ್ನು ನಿಗಧಿಪಡಿಸಿ ಮಾಸಿಕ ಬಾಡಿಗೆ ದರವು ಪ್ರತಿ ತಿಂಗಳಿಗೆ ರೂ.2294/- ಗಳಾಗುತ್ತದೆ. ಮಾಸಿಕ ಬಾಡಿಗೆಯನ್ನು ಪಡೆಯಲು ಸಹಾಯಕ ನಿರ್ವಾಹಕ ಅಭಿಯಂತರರು ಸೂಚಿಸಿರುವಂತೆ ಬಾಡಿಗೆ ನಿಗಧಿಪಡಿಸಿ ಶ್ರೀ.ರಾಮಯ್ಯ ರವರಿಗೆ ಮೀನು ಉಪಹಾರ ಮಳಿಗೆಯನ್ನು ಗುತ್ತಿಗೆ ಆಧಾರದ ಮೇಲೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ* ***ಮಾನ್ಯ ಆಯುಕ್ತರ ದಿನಾಂಕ: 17-12-2018ರ ಟಿಪ್ಪಣಿಯನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳೊಡನೆ ಚರ್ಚಿಸಲಾಗಿ, ಸಾರ್ವಜನಿಕ ಶೌಚಾಲಯ ಹಾಗೂ ಇಂದಿರಾ ಕ್ಯಾಂಟಿನ್ ಮಧ್ಯಭಾಗದಲ್ಲಿ ಬರುವ ಖಾಲಿ ಜಾಗದ ಪೈಕಿ ವಿಸ್ತೀರ್ಣ 10*10=100 ಚದರ ಅಡಿಗಳನ್ನು ಮೀನು ಉಪಹಾರ ಮಳಿಗೆ ನಿರ್ಮಿಸಲು ಶ್ರೀರಾಮಯ್ಯ ರವರಿಗೆ 5 (ಐದು) ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಸಂಬಂಧ ಮಾಸಿಕ ಮೊತ್ತ ನಿಗಧಿಪಡಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಖಾಂತರ ಅಂತಿಮ ತೀರ್ಮಾನಕ್ಕಾಗಿ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 16.02.2019ರ ಸಭೆಯ ನಿರ್ಣಯ.***

***ನಿರ್ಣಯ: ಆಯುಕ್ತರ ದಿನಾಂಕ: 17-12-2018ರ ಟಿಪ್ಪಣಿ ಹಾಗೂ ದಿನಾಂಕ: 16-02-2019ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## *361. ವಿಷಯದ ಸಂಖ್ಯೆ: ತೆಆಸ್ಥಾಸ/ 204 /2018-19*

***ಆಯುಕ್ತರ ದಿನಾಂಕ:28-11-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ವಾರ್ಡ್ ನಂ:167, ಯಡಿಯೂರು ವ್ಯಾಪ್ತಿಯ ಜಯನಗರದಲ್ಲಿನ ನಂದ ಚಿತ್ರಮಂದಿರದ ಮುಂಭಾಗದಲ್ಲಿ ಈಗಾಗಲೇ ಮೀನು ಮಾರಾಟ ಮಳಿಗೆಯನ್ನು ನಡೆಸುತ್ತಿದ್ದು, ಸದರಿ ಗುತ್ತಿಗೆ ಅವಧಿಯು ಮುಗಿದಿರುವುದರಿಂದ ಮರು ಗುತ್ತಿಗೆಯ ಅವಧಿಯನ್ನು 30 ವರ್ಷಗಳಿಗೆ (ಮೂವತ್ತು ವರ್ಷಕ್ಕೆ) ನವೀಕರಿಸಲು ಅರ್ಜಿದಾರರು ಕೋರಿರುತ್ತಾರೆ. ಸದರಿಯವರ ಮನವಿಯನ್ನು ಪರಿಶೀಲಿಸಿದ ತರುವಾಯ ಮೀನು ಮಾರಾಟ ಕೇಂದ್ರವನ್ನು ತೆರೆಯಲು ಜಾಗವು ಪಾಲಿಕೆಯ ಆಸ್ತಿಯಾಗಿರುತ್ತದೆ ಎಂದು ಸಂಬಂಧಿಸಿದ ಭೂಮಾಪಕರು ವಿವರ ವರದಿಯನ್ನು ವರದಿಸಿರುತ್ತಾರೆ.*

*ಪ್ರಸ್ತಾಪಿತ ಆಸ್ತಿಯ ಬಗ್ಗೆ ಅರ್ಜಿದಾರರು ಮನವಿ ಪತ್ರವನ್ನು ಸಲ್ಲಿಸಿ 10x8 ಅಡಿಗಳ ಜಾಗವನ್ನು ಮೀನು ಮಾರಾಟ ಉತ್ಪನ್ನಗಳ ಮಳಿಗೆಯನ್ನು ನವೀಕರಿಸಲು ಅನುಮತಿಯನ್ನು ನೀಡಲು ಕೋರಿರುವುದರಿಂದ ಪಾಲಿಕೆಯ ಯಾವುದೇ ಸ್ವತ್ತನ್ನು ಖಾಸಗಿಯವರಿಗೆ ನೀಡುವಾಗ ಈ ಕೆಳಕಂಡ ಕಾಯ್ದೆ ಅನ್ವಯ ಕ್ರಮವಹಿಸಬೇಕಾಗಿರುತ್ತದೆ.*

1. *ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು*

ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.

2. ***ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.***

ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

No movable property exceeding such sum in value as may be prescribed shall be sold otherwise than by public auction;
No property whether movable or immovable of whatever value shall be transferred free of cost or for an upset price;
no lease of any immovable property exceeding five years shall be granted;
no immovable property shall be disposed of by sale or by other transfer;
Except with the previous sanction of the Government. ಎಂದಿದ್ದು, ಈ ಬಗ್ಗೆ ಸೂಕ್ತ ಕ್ರಮಕ್ಕೆ ಅವಗಾಹನೆಗೆ ಸಲ್ಲಿಸಿದೆ.

ಪ್ರಸ್ತಾಪಿತ ಸ್ವತ್ತಿನ ಅಳತೆಯು 10x8=80 ಚದರಡಿಗಳಾಗಿದ್ದು, ಪ್ರಸಕ್ತ ಮಾರ್ಗಸೂಚಿ ದರವು (2017-18) ಚದರ ಮೀಟರ್ 1ಕ್ಕೆ ರೂ.1,35,600/- ಗಳಾಗಿದ್ದು, ಚದರಡಿ 1ಕ್ಕೆ ರೂ.12,600/- ಗಳಾಗುತ್ತದೆ. ಸ್ವತ್ತಿನ ಮೌಲ್ಯ 80ಚ.ಅಡಿx12,600=10,08,000/- ರೂಗಳಾಗುತ್ತದೆ. ವಾಣಿಜ್ಯಕ್ಕೆ ಶೇ 10% ರಷ್ಟು ಹೆಚ್ಚಿಸಿದಲ್ಲಿ ರೂ.1,00,800/- ಗಳು ಸೇರಿ ಒಟ್ಟು ಮೌಲ್ಯವು ರೂ.11,08,800/- ಗಳಾಗುತ್ತದೆ. ಸ್ವತ್ತಿನ ಮೌಲ್ಯ ಶೇ 10% ರಂತೆ ಪರಿಗಣಿಸಿದಾಗ ವಾರ್ಷಿಕ ರೂ.1,10,880/- ಗಳು, ಮಾಸಿಕ ರೂ.9240/- ಗಳಾಗುತ್ತದೆ.
ಆದುದರಿಂದ, ಸದರಿ ಹಿನ್ನಲೆಯಲ್ಲಿ ಶ್ರೀ.ದಿನೇಶ್ ರವರಿಗೆ ಮೀನು ಮಾರಾಟ ಮಳಿಗೆಯನ್ನು ನವೀಕರಿಸಲು 30 ವರ್ಷಗಳ ಅವಧಿಗೆ ಗುತ್ತಿಗೆಗೆ ಕೋರಿರುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ***ಮಾನ್ಯ ಆಯುಕ್ತರ ದಿನಾಂಕ: 28-11-2018ರ ಟಿಪ್ಪಣಿಯನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳೊಡನೆ ಚರ್ಚಿಸಲಾಗಿ, ಈಗಾಗಲೇ ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆ ಅವಧಿಯು ದಿನಾಂಕ: 31-03-2017ಕ್ಕೆ ಮುಕ್ತಾಯವಾಗಿದ್ದು, ಈ ಹಿನ್ನಲೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ,) ಮೈಸೂರು ರವರಿಗೆ 10*8 ಅಡಿಗಳ ಜಾಗವನ್ನು ಗುತ್ತಿಗೆ ಅವಧಿಯು ಮುಕ್ತಾಯವಾದ ದಿನಾಂಕದಿಂದ 30 ವರ್ಷಗಳಿಗೆ ಗುತ್ತಿಗೆ ಅವಧಿಯನ್ನು ಮುಂದುವರೆಸುವ ಸಂಬಂಧ ಮಾಸಿಕ ಮೊತ್ತ ನಿಗಧಿಪಡಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಖಾಂತರ ಅಂತಿಮ ತೀರ್ಮಾನಕ್ಕಾಗಿ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 16.02.2019ರ ಸಭೆಯ ನಿರ್ಣಯ.***

*ನಿರ್ಣಯ:* ***ದಿನಾಂಕ: 28-11-2018ರ ಆಯುಕ್ತರ ಟಿಪ್ಪಣಿ ಹಾಗೂ ದಿನಾಂಕ: 16-02-2019ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## 371. ವಿಷಯದ ಸಂಖ್ಯೆ: ತೆಆಸ್ಥಾಸ/ 205 /2018-19

**ಆಯುಕ್ತರ ದಿನಾಂಕ:07-12-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಸರ್ಕಾರಿ ಸಾಬೂನು ಕಾರ್ಖಾನೆ ಜಂಕ್ಷನ್‌ನಿಂದ ಮಾಗಡಿ ರಸ್ತೆ ಡಿವಿಯೇಶನ್ ರಸ್ತೆ ಜಂಕ್ಷನ್‌ವರೆಗೆ ಡಾ॥ ರಾಜ್‌ಕುಮಾರ್ ರಸ್ತೆಯ ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣ ಮಾಡಲು ರೂ. 44.80 ಕೋಟಿ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ: No.UDD 356 MNY 2012/(1) Bangalore Dated:10-07-2012ರಲ್ಲಿ ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿ ನಿರ್ಮಾಣದ ಗುತ್ತಿಗೆಯನ್ನು ಮೆ॥ಪಿ.ಜೆ.ಬಿ ಇಂಜಿನಿಯರ್ಸ್ ಪ್ರೈ. ಲೀ. ರವರಿಗೆ ದಿನಾಂಕ: 19-5-2014 ರಂದು ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ ಸಂಬಂಧಿಸಿದಂತೆ ಕೆಳಸೇತುವೆ ಪಕ್ಕದಲ್ಲಿ ಅಂದರೆ ಡಾ॥ ರಾಜ್‌ಕುಮಾರ್ ರಸ್ತೆಯ ಪಶ್ಚಿಮ ಭಾಗದಲ್ಲಿ ವಾಹನಗಳ ಓಡಾಟಕ್ಕಾಗಿ ಹಾಲಿ ಇರುವ ರಸ್ತೆಯನ್ನು ವಿಸ್ತರಿಸಬೇಕಾಗಿದ್ದು, ಈ ಕಾಮಗಾರಿಗಾಗಿ ಪಾಲಿಕೆಯ ವಾರ್ಡ್ ಸಂಖ್ಯೆ:67 ರಲ್ಲಿ ಬರುವ ಖಾಸಗಿ ಸ್ವತ್ತು ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ ಸಂಸ್ಥೆಯವರ ಸ್ವತ್ತಿನ ಪೈಕಿ ಸುಮಾರು 1011.61 ಚ.ಮೀ. ಅವಶ್ಯಕತೆ ಇರುತ್ತದೆ. ಸದರಿ ಸ್ವತ್ತನ್ನು ಭೂಸ್ವಾಧೀನ ಕಾಯ್ದೆಯಂತೆ ವಶಪಡಿಸಿಕೊಳ್ಳಲು ಹೆಚ್ಚಿನ ಕಾಲಾವಧಿಬೇಕಾಗಿರುವುದರಿಂದ ಹಾಗೂ ಯೋಜನೆಯ ಪ್ರಗತಿಗೂ ಸಹ ತೊಡಕು ಉಂಟಾಗಿರುವುದರಿಂದ ಸದರಿ ಸ್ವತ್ತನ್ನು ಕೆ.ಎಂ.ಸಿ ಕಾಯ್ದೆ 1976 ರ ಕಲಂ 175 ರಂತೆ ನೇರ ಖರೀದಿಯ ಮುಖಾಂತರ ಖರೀದಿಸಲು ಸ್ವತ್ತಿನ ಮಾಲೀಕರ ನಡುವೆ ದರಸಂಧಾನವನ್ನು ನಡೆಸಿ ಸದರಿ ಭೂಮಿಯನ್ನು ಖರೀದಿಸಲು ಕ್ರಮ ಜರುಗಿಸಲಾಗಿರುತ್ತದೆ. ಅದರಂತೆ ಕೇಂದ್ರ ಕಛೇರಿಯ ದರ ಸಂಧಾನ ಸಮಿತಿ ಅಧ್ಯಕ್ಷರಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:27-8-2016 ರಂದು ಏರ್ಪಡಿಸಿದ ಸಭೆಯಲ್ಲಿ ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ ರವರೊಂದಿಗೆ ಸಂಧಾನ ನಡೆಸಿ ದರ ಸಂಧಾನ ಸಮಿತಿಯ ಸಭೆಯ ತೀರ್ಮಾನದಂತೆ ಸದರಿ ಪ್ರದೇಶದ 2016ನೇ ಸಾಲಿನ ಮಾರ್ಗಸೂಚಿ ದರ ಬೆಲೆ ರೂ.96900/- ಪ್ರತಿ ಚ.ಮೀ. ಇದ್ದು ಶೇಕಡ 20% ಹೆಚ್ಚು ಅಂದರೆ ಪ್ರತಿ ಚ.ಮೀ.ಗೆ ರೂ.96900+19380=1,16,280/- ರಂತೆ ಪ್ರತಿ ಚ.ಅಡಿಗೆ ಅಂದಾಜು ಅಳತೆ 1011.61 ಚ.ಮೀ ಗಳಿಗೆ ಅಂತಿಮವಾಗಿ ಸೆಂಟ್ ಮೆರೀಸ್ ಇಮ್ಯಾಕೂಲೇಟ್ ರವರ ಒಪ್ಪಿಗೆ ಮೇರೆಗೆ ರೂ.11,70,00,000/- ಗಳನ್ನು ಪಾವತಿಸಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ಸಭೆಯ ತೀರ್ಮಾನದಂತೆ ಭೂಪರಿಹಾರವನ್ನು ಪಾವತಿಸಲು ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-3) ಹಾಗೂ ಮುಖ್ಯ ಅಭಿಯಂತರರು (ಯೋಜನೆ ಕೇಂದ್ರ) ರವರ ಮುಖೇನ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸ್ವತ್ತಿನ ವಿವರ ಈ ಕೆಳಕಂಡಂತಿದೆ.

| **ಕ್ರ. ಸಂ.** | **ಸರ್ವೆ ನಂ.** | **ಖಾತೆದಾರರು/ ಅನುಭವದಾರರ ಹೆಸರು** | **ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣಕ್ಕಾಗಿ ಬೇಕಾಗಿರುವ ವಿಸ್ತೀರ್ಣ (ಚ.ಮೀ)** | **ಮಾರ್ಗಸೂಚಿ ದರ ಬೆಲೆ ರೂ. (ಪ್ರತಿ ಚ.ಮೀ.ಗೆ) ಹಾಗೂ ಶೇ.20 ರಷ್ಟು ಹೆಚ್ಚುವರಿ 96900+20%** | **ದರ ಸಂಧಾನ ಸಮಿತಿಯು ಅನುಮೋದಿಸಿದ ಪರಿಹಾರದ ಮೊತ್ತ ರೂ.** |
|---|---|---|---|---|---|
| 1 | 180 | ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ (ಸಂಸ್ಥೆ) | 1011.61 ಚ.ಮೀ | 116280 | 11,70,00,000/- |
| | | | | | **ಒಟ್ಟು ರೂ. 11,70,00,000/-** |

ಈ ಹಿನ್ನಲೆಯಲ್ಲಿ ದಿನಾಂಕ:27-8-2016 ರಂದು ಕೆ.ಎಂ.ಸಿ ಕಾಯ್ದೆ 1976 ರ ಕಲಂ 175 ರೀತ್ಯ ಏರ್ಪಡಿಸಿದ ಕೇಂದ್ರಕಛೇರಿಯ ದರ ಸಂಧಾನ ಸಮಿತಿಯ ತೀರ್ಮಾನದಂತೆ ಸೆಂಟ್ ಮೆರೀಸ್

ಇಮ್ಯಾಕ್ಯೂಲೇಟ್ ರವರ ಸ್ವತ್ತಿನ ಭಾಗವಾದ 1011.61 ಚ.ಮೀ. ವಿಸ್ತೀರ್ಣದ ಜಾಗವನ್ನು ನೇರ ಖರೀದಿಯ ಮುಖಾಂತರ ಖರೀದಿಸಿದ ಮೊತ್ತ ರೂ.11,70,00,000/- (ಹನ್ನೊಂದು ಕೋಟಿ ಎಪ್ಪತ್ತು ಲಕ್ಷಗಳ ರೂ) ಗಳನ್ನು ಪಾವತಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ **ಮಾನ್ಯ ಆಯುಕ್ತರ ದಿನಾಂಕ: 07-12-2018ರ ಟಿಪ್ಪಣಿಯನ್ನು ಒಪ್ಪುತ್ತಾ, ಮುಂದಿನ ಅಂತಿಮ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಖಾಂತರ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 16.02.2019ರ ಸಭೆಯ ನಿರ್ಣಯ.**

**ನಿರ್ಣಯ: ದಿನಾಂಕ: 16-02-2019ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಆಯುಕ್ತರ ದಿನಾಂಕ: 07-12-2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 381. ವಿಷಯದ ಸಂಖ್ಯೆ: ತೆಆಸ್ಥಾಸ/ 206 /2018-19

**ಆಯುಕ್ತರ ದಿನಾಂಕ: 05-02-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಶ್ರೀ ಗುರುರಾಜ ಅಸೋಸಿಯೇಷನ್ (ರಿ) ನಂ. 53 ಮಾದರಿ ಮನೆಗಳ ಬೀದಿ. ಬಸವನಗುಡಿ ಬೆಂಗಳೂರು-560004 ರವರು ಶ್ರೀ. ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಹೊಂದಿಕೊಂಡಿರುವಂತೆ ಇರುವ ಕನ್ಸರ್‌ವೆನ್ಸಿ ಜಾಗವನ್ನು ಶ್ರೀ ಮಠಕ್ಕೆ ಗುತ್ತಿಗೆಗೆ ನೀಡಲಾಗಿರುತ್ತದೆ.

ಶ್ರೀ ಗುರುರಾಜ ಅಸೋಸಿಯೇಷನ್ ರವರ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಹೊಂದಿಕೊಂಡಿರುವಂತೆ ಇರುವ ಕನ್ಸರ್‌ವೆನ್ಸಿ ಜಾಗವನ್ನು ಶ್ರೀ ಮಠಕ್ಕೆ ಗುತ್ತಿಗೆ ನೀಡಲು ಮಾನ್ಯ ಪೂಜ್ಯ ಮಹಾಪೌರರು ಹಾಗೂ ಆಯುಕ್ತರಿಗೆ ಮನವಿ ಸಲ್ಲಿಸಿ, ಪಾಲಿಕೆಯ ವತಿಯಿಂದ ಮಾಸಿಕ ಗುತ್ತಿಗೆಯ ಬಾಡಿಗೆ ಮೊತ್ತ ರೂ. 56,440/-ಗಳನ್ನು ನಿಗದಿಪಡಿಸಿರುವ ಮೊತ್ತವನ್ನು ಕಡಿಮೆ ಮಾಡಿ, ಈ ಮಠಕ್ಕೆ ರೂ. 5,000/-ಗಳು ಮಾಸಿಕ ಬಾಡಿಗೆ ನಿಗದಿಪಡಿಸಲು ಕೋರಿರುವುದನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ ಮಂಡಿಸಲಾಗಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಈ ಕೆಳಕಂಡಂತೆ ನಿರ್ಣಯ ಕೈಗೊಂಡಿರುತ್ತದೆ.

ಆಯುಕ್ತರ ದಿನಾಂಕ: 14-08-2018ರ ಟಿಪ್ಪಣಿಯನ್ನು ಒಪ್ಪುತ್ತಾ, ಮಾಸಿಕ ಗುತ್ತಿಗೆ ದರ ರೂ. 5,000/- (ಐದು ಸಾವಿರ ಮಾತ್ರ) ಗಳಿಗೆ ನಿಗದಿಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

ಅದರಂತೆ ಶ್ರೀ ಗುರುರಾಜ ಅಸೋಸಿಯೇಷನ್ ರವರ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದವರು ಮಾಸಿಕ ಗುತ್ತಿಗೆ ಹಣ ರೂ. 5,000/-ಗಳಂತೆ ದಿನಾಂಕ: 29-11-2011 ರಿಂದ 30.11.2016ರವರೆಗೆ ಒಟ್ಟು ರೂ. 3,54,000/- ಗಳನ್ನು ದಿನಾಂಕ: 16-10-2018ರಂದು ಪಾವತಿ ಮಾಡಿರುತ್ತಾರೆ.

ಶ್ರೀ ರಾಘವೇಂದ್ರ ಸ್ವಾಮಿ ಮಠದ ಕೈಂಕರ್ಯಗಳಿಗೆ ಸಹಕಾರ ನೀಡಬೇಕೆಂದು ನಗರ ಪಾಲಿಕೆ ಸದಸ್ಯರಾದ ಶ್ರೀ. ಬಿ.ಎಸ್.ಸತ್ಯನಾರಾಯಣ ಹಾಗೂ ಸಹಾಯಕ ಕಂದಾಯ ಅಧಿಕಾರಿ ರವರಿಗೆ ಮನವಿ ಸಲ್ಲಿಸಿದ್ದು, ನಗರ ಪಾಲಿಕೆ ಸದಸ್ಯರಾದ ಶ್ರೀ ಬಿ.ಎಸ್.ಸತ್ಯನಾರಾಯಣ ರವರು ಸಹಾ ಸದರಿ ಸಂಸ್ಥೆಗೆ ಗುತ್ತಿಗೆಯನ್ನು ಮುಂದಿನ 5 ವರ್ಷಗಳ ಅವಧಿಗೆ ನವೀಕರಿಸಲು ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಶ್ರೀ. ಗುರುರಾಜ ಅಸೋಸಿಯೇಷನ್‌ರವರು ಶ್ರೀ ರಾಘವೇಂದ್ರ ಸ್ವಾಮಿಗಳ ದೇವಸ್ಥಾನ (ಮಠ) ನಂ 53 ಮಾದರಿ ಮನೆಗಳ 1ನೇ ಬೀದಿ ಮಠಕ್ಕೆ

ಹೊಂದಿಕೊಂಡಿರುವಂತೆ ಇರುವ ಕನ್ಸರ್‌ವೆನ್ಸಿ ಜಾಗವನ್ನು ಈಗಾಗಲೇ ದಿನಾಂಕ: 29-11-2011ರಿಂದ 30-11-2016ರ ವರೆಗೆ ಗುತ್ತಿಗೆ ನೀಡಿದ್ದು, ದಿನಾಂಕ: 30-11-2016ಕ್ಕೆ ಗುತ್ತಿಗೆ ಅವಧಿಯು ಮುಕ್ತಾಯವಾಗಿರುತ್ತದೆ.

> "ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ ಹಾಗು 176 ಹಾಗೂ 176 (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನಿಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರಿಗೆ, 5 ವರ್ಷದವರೆಗೂ ಹಾಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ."

ಅರ್ಜಿದಾರರು ಶ್ರೀ. ಗುರುರಾಜ ಅಸೋಸಿಯೇಷನ್ (ರಿ)ರವರು ಶ್ರೀ. ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಹೊಂದಿಕೊಂಡಿರುವಂತೆ ಇರುವ ಕನ್ಸರ್‌ವೆನ್ಸಿ ಜಾಗಕ್ಕೆ ಈಗಗಲೇ ದಿನಾಂಕ: 29-11-2011 ರಿಂದ 30-11-2016ಕ್ಕೆ ಗುತ್ತಿಗೆ ಅವಧಿಯು ಮುಗಿದಿದ್ದು ಸದರಿ ಗುತ್ತಿಗೆ ಅವಧಿಯನ್ನು ದಿನಾಂಕ: 01-12-2016ರಿಂದ ಮುಂದಿನ 5 ವರ್ಷಗಳ ಗುತ್ತಿಗೆ ಅವಧಿಗೆ ನವೀಕರಿಸಲು ಹಾಗೂ ಸದರಿ ಗುತ್ತಿಗೆ ಅವಧಿಗೆ ಬಾಡಿಗೆ ಮೊತ್ತವನ್ನು ನಿಗಧಿಪಡಿಸಲು ಕಡತವನ್ನು ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ **ಮಾನ್ಯ ಆಯುಕ್ತರ ದಿನಾಂಕ: 05.02.2019ರ ಟಿಪ್ಪಣಿಯನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳೊಡನೆ ಸುಧೀರ್ಘವಾಗಿ ಚರ್ಚಿಸಲಾಗಿ, ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆ ಅವಧಿಯು ದಿನಾಂಕ: 30.11.2016ಕ್ಕೆ ಮುಕ್ತಾಯವಾಗಿದ್ದು, ಈ ಹಿನ್ನಲೆಯಲ್ಲಿ ಗುತ್ತಿಗೆ ಅವಧಿಯು ಮುಕ್ತಾಯವಾದ ದಿನಾಂಕದಿಂದ 5 ವರ್ಷಗಳ ಗುತ್ತಿಗೆ ಅವಧಿಯನ್ನು ಮುಂದುವರೆಸುವ ಸಂಬಂಧ ಮಾಸಿಕ ಮೊತ್ತ ನಿಗಧಿಪಡಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಖಾಂತರ ಅಂತಿಮ ತೀರ್ಮಾನಕ್ಕಾಗಿ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಆಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 16.02.2019ರ ಸಭೆಯ ನಿರ್ಣಯ.**

**ನಿರ್ಣಯ: ನಗರ ಯೊಜನೆ ಮತ್ತು ಅಬಿವೃದ್ಧಿ ಸ್ಥಾಯಿ ಸಮಿತಿ ರವರ ದಿನಾಂಕ: 16.02.2019ರ ಟಿಪ್ಪಣಿಯನ್ನು ಒಪ್ಪುತ್ತಾ, ಮಾಸಿಕ ಗುತ್ತಿಗೆ ದರ ರೂ.6000/- (ರೂ.ಆರು ಸಾವಿರ ಮಾತ್ರ) ಗಳನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## 391. ವಿಷಯದ ಸಂಖ್ಯೆ: ತೆಆಸ್ಥಾಸ/ 207 /2018-19

**ವಿಶೇಷ ಆಯುಕ್ತರು (ಶಿಕ್ಷಣ) ರವರ ದಿನಾಂಕ: 06-10-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿದ್ಯಾಇಲಾಖೆಯವ್ಯಾಪ್ತಿಗೆ ಒಳಪಡುವ 90 ಶಿಶುವಿಹಾರ, 14 ಪ್ರಾಥಮಿಕ, 32 ಪ್ರೌಢಶಾಲೆ, 14 ಕಿರಿಯ ಕಾಲೇಜು ಮತ್ತು 04 ಪದವಿ ಕಾಲೇಜುಗಳ ಮೂಲಕ ಶಿಕ್ಷಣವನ್ನು ನೀಡುತ್ತಿದೆ.

ಈ ಮೇಲ್ಕಂಡ ಶಾಲಾ/ಕಾಲೇಜುಗಳಲ್ಲಿ 29-12-2017ರಂದು ಡಾ॥ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆಯಿತು. ಈ ಕಾರ್ಯಕ್ರಮಕ್ಕೆ ಒಟ್ಟು ವೆಚ್ಚವಾಗಿರುವ ಮೊತ್ತ ರೂ.19,97,294/-ಗಳಾಗಿರುತ್ತದೆ. ಈ ಮೊತ್ತದಲ್ಲಿ ಮಾನ್ಯ ಆಯುಕ್ತರುರವರ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅನುಮೋದನೆಯಂತೆ ರೂ.8,40,000/-ಗಳನ್ನು ಒಂದನೇ ಕಂತಿನಲ್ಲಿ ಸಂಬಂಧಪಟ್ಟ ಸಂಸ್ಥೆಗಳಿಗೆ ಆರ್.ಟಿ.ಜಿ.ಎಸ್ ಮೂಲಕ ಪಾವತಿಸಲಾಗಿರುತ್ತದೆ.

ದಿನಾಂಕ:14-12-2017ರಂದು ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿರವರ ಅಧ್ಯಕ್ಷತೆಯಲ್ಲಿ ಗುರುವಂದನಾ ಕಾರ್ಯಕ್ರಮದ ಸಭೆಯನ್ನು ಆಯೋಜಿಸಿ, 2017-18ನೇ ಸಾಲಿನ ಆಯವ್ಯಯದಲ್ಲಿ ರೂ.20.00 ಲಕ್ಷಗಳು ಮೀಸಲಿರಿಸಿದ್ದು, ಈಗಾಗಲೇ ನೀಡಿರುವ ಮೊತ್ತ ಕಡಿಮೆ ಇದ್ದು, ಉಳಿದ ಮೊತ್ತ ರೂ.11,57,294/-ಗಳನ್ನು ಭರಿಸಲು ಸಕ್ಷಮ ಪ್ರಾಧಿಕಾರ ಅನುಮೋದನೆ ಪಡೆಯಲು ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಸಭೆಯ ತೀರ್ಮಾನದಂತೆ ಉಳಿಕೆ ಮೊತ್ತವನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಕೆ.ಟಿ.ಟಿ.ಪಿ ನಿಯಮವಳಿ ರೀತ್ಯ ಪಾವತಿಸಬೇಕಾಗಿರುತ್ತದೆ. ವೆಚ್ಚವಾದ ವಿವರ ಈ ಕೆಳಕಂಡಂತಿರುತ್ತದೆ.

| | |
|---|---|
| ದಿನಾಂಕ:31-03-2016 ರಿಂದ 31-03-2017 ರವರೆಗೆ ವಯೋನಿವೃತ್ತಿ ಶಿಕ್ಷಕರಿಗೆ ಸನ್ಮಾನಕ್ಕೆ ಶಾಲುಗಳು, ಹೂವಿನ ಹಾರಗಳು ಮತ್ತು ಹಣ್ಣಿನ ಬುಟ್ಟಿಗಳನ್ನು ಖರೀದಿಸಲು ವೆಚ್ಚವಾಗಿರುವ ಮೊತ್ತ | 99000 |
| ನಿವೃತ್ತ ಶಿಕ್ಷಕರಿಗೆ ಏಲಕ್ಕಿ ಹಾರಗಳನ್ನು ಖರೀದಿಸಲು ವೆಚ್ಚವಾಗಿರುವ ಮೊತ್ತ | 96000 |
| ಉತ್ತಮ ಸೇವೆ ಸಲ್ಲಿಸಿ ಆಯ್ಕೆಯಾಗಿರುವ ಹಾಲಿ ಶಿಕ್ಷಕರ ಸನ್ಮಾನಕ್ಕೆ ಶಾಲುಗಳು, ಹೂವಿನ ಹಾರಗಳು ಮತ್ತು ಹಣ್ಣಿನ ಬುಟ್ಟಿಗಳನ್ನು ಖರೀದಿಸಲು ವೆಚ್ಚವಾಗಿರುವ ಮೊತ್ತ | 78400 |
| ಉತ್ತಮ ಸೇವೆ ಸಲ್ಲಿಸಿ ಆಯ್ಕೆಯಾಗಿರುವ ಹಾಲಿ ಶಿಕ್ಷಕರ ಸನ್ಮಾನಕ್ಕೆ ಏಲಕ್ಕಿ ಹಾರಗಳನ್ನು ಖರೀದಿಸಲು ವೆಚ್ಚವಾಗಿರುವ ಮೊತ್ತ | 90000 |
| ನಿವೃತ್ತ ಶಿಕ್ಷಕರಿಗೆ ನೆನಪಿನ ಕಾಣಿಕೆ ಖರೀದಿಸಲು ವೆಚ್ಚವಾಗಿರುವ ಮೊತ್ತ | 98000 |
| ಉತ್ತಮ ಸೇವೆ ಸಲ್ಲಿಸಿ ಆಯ್ಕೆಯಾಗಿರುವ ಹಾಲಿ ಶಿಕ್ಷಕರಿಗೆ ನೆನಪಿನ ಕಾಣಿಕೆ ಖರೀದಿಸಲು ವೆಚ್ಚವಾಗಿರುವ ಮೊತ್ತ | 95000 |
| ನಿವೃತ್ತ ಶಿಕ್ಷಕರಿಗೆ ಮಿಕ್ಸಡ್ ಡ್ರೈ ಫ್ರೂಟ್ಸ್ ಉತ್ತಮ ಗುಣಮಟ್ಟದ್ದು (ದ್ರಾಕ್ಷಿ, ಗೋಡಂಬಿ, ಬಾದಾಮಿ ಮತ್ತು ಪಿಸ್ತ) ಖರೀದಿಸಲು ವೆಚ್ಚವಾಗಿರುವ ಮೊತ್ತ | 98000 |
| ವಿಶೇಷ ಆಹ್ವಾನಿತರಿಗೆ ಮತ್ತು ಮುಖ್ಯ ಅತಿಥಿಗಳಿಗೆ ಮಿಕ್ಸಡ್ ಡ್ರೈ ಫ್ರೂಟ್ಸ್ ಉತ್ತಮ ಗುಣಮಟ್ಟದ್ದು (ದ್ರಾಕ್ಷಿ, ಗೋಡಂಬಿ, ಬಾದಾಮಿ ಮತ್ತು ಪಿಸ್ತ) ಖರೀದಿಸಲು ವೆಚ್ಚವಾಗಿರುವ ಮೊತ್ತ | 99000 |
| ವಿಶೇಷ ಆಹ್ವಾನಿತರಿಗೆ ಏಲಕ್ಕಿ ಹಾರಗಳನ್ನು ಖರೀದಿಸಲು ವೆಚ್ಚವಾಗಿರುವ ಮೊತ್ತ | 98000 |
| ಉತ್ತಮ ಶಿಕ್ಷಕರಿಗೆ ಮತ್ತು ಪಾಲಿಕೆಯ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ಮತ್ತು ಪಾರಿತೋಷಕಗಳನ್ನು ಖರೀದಿಸಲುವೆಚ್ಚವಾಗಿರುವ ಮೊತ್ತ | 95000 |
| ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರನೀಡಲು ಪದಕಗಳನ್ನು ಖರೀದಿಸಲು ವೆಚ್ಚವಾಗಿರುವ ಮೊತ್ತ | 95000 |
| ಕಾರ್ಯಕ್ರಮದ ಆಹ್ವಾನ ಪತ್ರಿಕೆಗಳು ಮತ್ತು ಬ್ಯಾಡ್ಜ್‌ಗಳನ್ನು ಖರೀದಿಸಲು ವೆಚ್ಚವಾಗಿರುವ ಮೊತ್ತ | 96000 |
| ಒಟ್ಟು ಮೊತ್ತರೂ. | 11,57,294/- |

ಮೇಲ್ಕಂಡ ಮೊತ್ತವನ್ನು ಭರಿಸಲು 2017-18ನೇ ಸಾಲಿನ ಆಯವ್ಯಯ ಮಾರ್ಚ್-2018ಕ್ಕೆ ಮುಕ್ತಾಯವಾಗಿರುವುದ ರಿಂದ ಸದರಿ ಮೊತ್ತವನ್ನು ಭರಿಸಲು ಅನುದಾನ ಲಭ್ಯವಿರುವುದಿಲ್ಲ.

ಸದರಿ ಮೊತ್ತವನ್ನು 2018-19ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 18 ಶಿಕ್ಷಣ, ಆಡಳಿತಾತ್ಮಕ ವೆಚ್ಚಗಳು, ಸಭೆ ಸಮಾರಂಭಗಳು, ಪಿ.ಕೋಡ್-3269ರಲ್ಲಿ ಪಾಲಿಕೆಯ ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಎನ್.ಸಿ.ಸಿ.ಸಮವಸ್ತ್ರಗಳ ವಿತರಣೆ ಲೆಕ್ಕಶೀರ್ಷಿಕೆ ರೂ.25.00 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು ಪಾಲಿಕೆಯ

ಶಾಲಾ/ಕಾಲೇಜುಗಳಲ್ಲಿ ಎನ್.ಸಿ.ಸಿ. ತಂಡಗಳಿಲ್ಲದ ಕಾರಣ ಸದರಿ ಮೊತ್ತದಲ್ಲಿ ಪಾವತಿಯಾಗದೇ ಬಾಕಿ ಇರುವ ಮೊತ್ತ ರೂ.11,57,294/–(ರೂ.ಹನ್ನೊಂದು ಲಕ್ಷದ ಐವತ್ತೇಳು ಸಾವಿರದ ಇನ್ನೂರ ತೊಂಬತ್ತ ನಾಲ್ಕುಗಳು ಮಾತ್ರ)ಗಳನ್ನು ಭರಿಸಲು ಕಡತದ ಕಂಡಿಕೆ–(07)ರಲ್ಲಿ ಮಾನ್ಯ ಆಯುಕ್ತರು ರವರು ಅನುಮೋದನೆ ನೀಡಿರುತ್ತಾರೆ. ಸದರಿ ಅನುಮೋದನೆಯಂತೆ ರೂ.11,57,294/–ಗಳನ್ನು ಭರಿಸಲು ಶಿಕ್ಷಣ ಸ್ಥಾಯಿ ಸಮಿತಿ ಅನುಮೋದನೆ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮರು ಹೊಂದಾಣಿಕೆಗೆ ಮಂಡಿಸಿರುವ **ದಿನಾಂಕ:06.10.2018ರ ಟಿಪ್ಪಣಿ. ವಿಶೇಷ ಆಯುಕ್ತರು (ಶಿಕ್ಷಣ) ರವರ ಟಿಪ್ಪಣಿಯನ್ನು ಒಪ್ಪುತ್ತಾ, ಮುಂದಿನ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸುವುದೆಂದು ತೀರ್ಮಾನಿಸಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 13–02–2019ರ ಸಭೆಯ ನಿರ್ಣಯ.**

**ನಿರ್ಣಯ: ದಿನಾಂಕ: 13–02–2019ರ ಶಿಕ್ಷಣ ಸಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 401. ವಿಷಯದ ಸಂಖ್ಯೆಃ ತೆಆಸ್ಥಾಸ/ 208 /2018–19

**ವಿಶೇಷ ಆಯುಕ್ತರು (ಹಣಕಾಸು) ರವರ ದಿನಾಂಕ: 26–02–2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಕರ್ನಾಟಕ ಸ್ಟೇಟ್ ಲಾನ್ ಟೆನಿಸ್ ಅಸೋಸಿಯೇಷನ್, ಕಿಂಗ್ ಫಿಷರ್ ಸ್ಟೇಡಿಯಂ, ಕಬ್ಬನ್ ಪಾರ್ಕ್, ಬೆಂಗಳೂರು ರವರು ದಿನಾಂಕ:07–07–2018ರಂದು ಪೂಜ್ಯ ಮಹಪೌರರವರಿಗೆ "Contribution of Rs.50 Lac for infrastructure development at KSLTA for 'BENGALURU OPEN' an ATP $150,000 Challenger International Tennis tournament" ನಡೆಯಲಿದ್ದು, ಸದರಿ ಅಸೋಸಿಯೇಷನ್‌ನಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯ ಹೆಚ್ಚಿಸಲು ಪಾಲಿಕೆವತಿಯಿಂದ ರೂ.50.00 ಲಕ್ಷಗಳ ಮೊತ್ತವನ್ನು ನೀಡಲು ಕೋರಿದ್ದು, ಈ ವಿಚಾರದಲ್ಲಿ ಪೂಜ್ಯ ಮಹಾಪೌರರ ಟಿಪ್ಪಣಿ ಸಂ:42/2018–19, ದಿನಾಂಕ:07–09–2018 ರಲ್ಲಿ ಸದರಿ ಅಸೋಸಿಯೇಷನ್‌ನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಅನುದಾನ ರೂ.50.00 ಲಕ್ಷಗಳ ಮೊತ್ತವನ್ನು 2018–19ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: ಪಿ–0190 ಅಡಿಯಲ್ಲಿ ಮೀಸಲಿಟ್ಟಿರುವ ರೂ.160.00 ಕೋಟಿ ಮೊತ್ತದಲ್ಲಿ ರೂ.50.00 ಲಕ್ಷಗಳ ಮೊತ್ತವನ್ನು ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ 2018–19ನೇ ಸಾಲಿನ ಲೆಕ್ಕಶೀರ್ಷಿಕೆ : ಪಿ–0190 ಅಡಿಯಲ್ಲಿ ಮೀಸಲಿಟ್ಟಿರುವ ರೂ.160.00 ಕೋಟಿ ಮೊತ್ತದಲ್ಲಿ ಪಾಲಿಕೆ ಪೂರ್ವ ವಲಯದ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಸ್ಟೇಟ್ ಲಾನ್ ಟೆನಿಸ್ ಅಸೋಸಿಯೇಷನ್, ಕಿಂಗ್ ಫಿಷರ್ ಸ್ಟೇಡಿಯಂ, ಕಬ್ಬನ್ ಪಾರ್ಕ್, ಬೆಂಗಳೂರು ಮೂಲಭೂತ ಸೌಕರ್ಯದ ಅಭಿವೃದ್ಧಿಗಾಗಿ ಲೆಕ್ಕಶೀರ್ಷಿಕೆ: ಪಿ–0048 ಗೆ ರೂ.50.00 ಲಕ್ಷಗಳ ಮೊತ್ತವನ್ನು ಮರುಹೊಂದಾಣಿಕೆ ಮೂಲಕ 2018–19ನೇ ಸಾಲಿನಲ್ಲಿ ಅನುದಾನ ಲಭ್ಯತೆಗನುಸಾರ ವೆಚ್ಚ ಭರಿಸಿ, ಪಾಲಿಕೆಯ ಲೆಕ್ಕಪತ್ರದಲ್ಲಿ ಅಳವಡಿಸಿಕೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನ ಕೈಗೊಳ್ಳುವ ಕುರಿತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಹಣಕಾಸು) ರವರ ದಿನಾಂಕ: 26–02–2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 41]. ವಿಷಯದ ಸಂಖ್ಯೆಃ ತೆಆಸ್ಥಾಸ/ 209 /2018-19

**ವಿಶೇಷ ಆಯುಕ್ತರು (ಕಲ್ಯಾಣ) ರವರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಶ್ರೀ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, 9ನೇ ಹಂತ, ಜಯನಗರ, ಬೆಂಗಳೂರು-560069 ರವರು 2018-19ನೇ ಸಾಲಿಗೆ ರೂ. 200.00 (ಎರಡು ನೂರು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.

ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್ ಪಿಕೋಡ್ 2355ರಲ್ಲಿ, ಮೊತ್ತ ರೂ.200.00 (ಎರಡು ನೂರು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಶ್ರೀ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ 200.00 (ಎರಡು ನೂರು) ಲಕ್ಷಗಳ ಸಹಾಯಧನದಲ್ಲಿ ವಿಶೇಷ ಆಯುಕ್ತರು (ಹಣಕಾಸು)ರವರು ರೂ.100.00 ಲಕ್ಷಗಳಿಗೆ ಅನುಮೋದನೆಯ ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರು ಅನುಮೋದಿಸಿದ್ದು, ಅದರಂತೆ ರೂ.100.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 26-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 42]. ವಿಷಯದ ಸಂಖ್ಯೆಃ ತೆಆಸ್ಥಾಸ/ 210 /2018-19

**ವಿಶೇಷ ಆಯುಕ್ತರು (ಕಲ್ಯಾಣ) ರವರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಶೈಲುಷಂ ಆರ್ಟ್ಸ್ ಮತ್ತು ಕ್ರಿಯೇಷನ್ಸ್ (ರಿ.), ನಂ.430, ಪೂರ್ಣ ಪ್ರಜ್ಞಾ ರೆಸಿಡೆನ್ಸಿ, ಪಿಪಿ ಲೇಔಟ್, ಉತ್ತರಹಳ್ಳಿ, ಬೆಂಗಳೂರು-560061 ರವರು 2018-19ನೇ ಸಾಲಿಗೆ ರೂ. 4.00 (ನಾಲ್ಕು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.

ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 0048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 8ರಲ್ಲಿ ಮೊತ್ತ ರೂ. 4.00 (ನಾಲ್ಕು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಶೈಲುಷಂ ಆರ್ಟ್ಸ್ ಮತ್ತು ಕ್ರಿಯೇಷನ್ಸ್ (ರಿ.), 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ 4.00 (ನಾಲ್ಕು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 26-02-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## 431. ವಿಷಯದ ಸಂಖ್ಯೆಃ ತೆಆಸ್ಥಾಸ/ 213 /2018-19

**ಆಯುಕ್ತರು ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** 2017-18ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಸೌಲಭ್ಯಗಳನ್ನು ಒದಗಿಸಲು 1. ಸಿ.ಇ.ಟಿ.ಟ್ಯಾಲಿ ಮತ್ತು ಕಂಪ್ಯೂಟರ್ ಶಿಕ್ಷಣ, 2. ಶುದ್ಧ ಕುಡಿಯುವ ನೀರಿನ ಘಟಕಗಳ ಅಳವಡಿಕೆ, 3. ಅಗ್ನಿಶಾಮಕ ಉಪಕರಣಗಳ ಅಳವಡಿಕೆ ಮತ್ತು 4. ಪಾಲಿಕೆಯ ಶಾಲಾ / ಕಾಲೇಜುಗಳಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆ ವ್ಯವಸ್ಥೆ, 5. ಗಣಕ ಯಂತ್ರಗಳ, ಸಿ.ಸಿ.ಟಿ.ವಿ. ಮತ್ತು ತತ್ರಾಂಶಗಳ ದುರಸ್ಥಿ ಮತ್ತು ನಿರ್ವಹಣೆಗಳಿಗೆ ಟೆಂಡರ್ ಕರೆಯಲಾಗಿತ್ತು ಆದರೆ ಟೆಂಡರ್‌ನ ಆರ್ಥಿಕ ವರ್ಷವು ದಿನಾಂಕ: 31-03-2018 ಮುಕ್ತಾಯವಾಗಿರುತ್ತದೆ. 2018ರ ಸಾರ್ವತ್ರಿಕ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದುದ್ದರಿಂದ ಟೆಂಡರ್‌ನ ತಾಂತ್ರಿಕ ದಾಖಲಾತಿಗಳನ್ನು ಪರಿಶೀಲಿಸಲು ಟೆಂಡರ್‌ನ ತಾಂತ್ರಿಕ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯುವ ಸಂಬಂಧ ಉಪ ಆಯುಕ್ತರು (ಆಡಳಿತ) ರವರನ್ನು ಕೋರಲಾಗಿ ಸಾರ್ವತ್ರಿಕ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಸಭೆಯನ್ನು ಕರೆಯಲು ಬರುವುದಿಲ್ಲವೆಂದು ಮೌಖಿಕವಾಗಿ ತಿಳಿಸಿದ್ದರಿಂದ ಮತ್ತು ಚುನಾವಣೆ ನೀತಿ ಸಂಹಿತೆ ಮುಕ್ತಾಯವಾಗಿರುವುದರಿಂದ ಸದರಿ ಟೆಂಡರ್‌ಗಳನ್ನು ಮುಂದುವರೆಸುವ ಬಗ್ಗೆ ಹಾಗೂ ಈ ಕೆಳಕಂಡ ಕಾರ್ಯಕ್ರಮಗಳಿಗೆ ಅನುದಾನದ ಬಗ್ಗೆ ಮುಖ್ಯಲೆಕ್ಕಾಧಿಕಾರಿರವರ ಅಭಿಪ್ರಾಯವನ್ನು ಕೋರಲಾಗಿದ್ದು ಮುಖ್ಯಲೆಕ್ಕಾಧಿಕಾರಿಗಳು ಟೆಂಡರ್‌ಗಳನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಿಂದ ಮರುಹೊಂದಾಣಿಕೆ ಮಾಡಿ ಕೊಂಡು ಮುಂದುವರೆಸುವಂತೆ ಅಭಿಪ್ರಾಯ ನೀಡಿರುತ್ತಾರೆ.

| ಕ್ರ.ಸಂ | ವಿವರಣೆಗಳು | ಪಿ ಕೋಡ್ | 2017-18 ಸಾಲಿನಲ್ಲಿ ಮೀಸಲಿರಿಸಿರುವ ಮೊತ್ತ ರೂ. |
|---|---|---|---|
| 1 | ಪಾಲಿಕೆ ಪಿಯುಸಿ ವಿದ್ಯಾರ್ಥಿಗಳಿಗೆ ಸಿ.ಇ.ಟಿ. ತರಬೇತಿ ಮತ್ತು ಕಾಮರ್ಸ್ ವಿದ್ಯಾರ್ಥಿಗಳಿಗೆ ಟ್ಯಾಲಿ ಮತ್ತು ಗಣಕ ಯಂತ್ರ ಕೋರ್ಸ್‌ಗಳ ತರಬೇತಿ | ಪಿ3277 | 200.00 |
| 2 | ಪಾಲಿಕೆಯ ಶಾಲಾ / ಕಾಲೇಜುಗಳಿಗೆ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ | ಪಿ3267 | 27.00 |
| 3 | ಪಾಲಿಕೆಯ ಶಾಲಾ / ಕಾಲೇಜುಗಳಲ್ಲಿ ಅಗ್ನಿಶಾಮಕ ಉಪಕರಣಗಳ ಅಳವಡಿಕೆ | ಪಿ3264 | 100.00 |
| 4 | ಪಾಲಿಕೆಯ ಶಾಲಾ / ಕಾಲೇಜುಗಳಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆ ವ್ಯವಸ್ಥೆ | ಪಿ3265 | 5.00 |
| 5 | ಪಾಲಿಕೆಯ ಶಾಲಾ / ಕಾಲೇಜುಗಳಲ್ಲಿ ಗಣಕಯಂತ್ರ, ಸಿ.ಸಿ.ಟಿ.ವಿ. ತಂತ್ರಾಂಶಗಳ ದುರಸ್ತಿ ಮತ್ತು ವಾರ್ಷಿಕ ನಿರ್ವಹಣೆ | ಪಿ3279 | 100.00 |

ಈ ಮೇಲ್ಕಂಡ ಕಾರ್ಯಕ್ರಮಗಳಿಗೆ ಮುಖ್ಯ ಲೆಕ್ಕಾಧಿಕಾರಿಗಳು 2018-19ನೇ ಸಾಲಿಗೆ ಮೇಲ್ಕಂಡ ಕಾರ್ಯಕ್ರಮಗಳಿಗೆ ತಗಲುವ ಮೊತ್ತವನ್ನು ಪಿಕೋಡ್ ಪಿ3277 ರಲ್ಲಿ ಯಾವುದೇ ಅನುದಾನ ಮೀಸಲಿರಿಸಿರುವುದಿಲ್ಲ ಹಾಗೂ ಪಿ3267 ರಲ್ಲಿ ರೂ. 500.00 ಲಕ್ಷ, ಪಿ3264 ರಲ್ಲಿ ರೂ. 50.00 ಲಕ್ಷ, ಪಿ3265 ರಲ್ಲಿ ರೂ. 5.00 ಲಕ್ಷ, ಮತ್ತು ಪಿ3279 ರಲ್ಲಿ ರೂ. 25.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು ಆದ್ಯತೆ ಮೇರೆಗೆ ತಗಲುವ ಮೊತ್ತವನ್ನು ಬೇರೆ ಲೆಕ್ಕ ಶೀರ್ಷಿಕೆಗಳಿಂದ ಮರುಹೊಂದಾಣಿಕೆ ಮಾಡಿಕೊಳ್ಳುವ

ಸಂಬಂಧದ ಮೇರೆಗೆ ಟೆಂಡರ್ ಪ್ರಕ್ರಿಯೆ ಮುಂದುವರೆಸಬಹುದು ಎಂದು ಅಭಿಪ್ರಾಯ ನೀಡಿದ್ದು ಅದರಂತೆ, ಟೆಂಡರ್ ಕಾಲಾವಧಿಯನ್ನು ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೂ ವಿಸ್ತರಿಸಿ, ಯಾವ ಲೆಕ್ಕಶೀರ್ಷಿಕೆಯಡಿ ಯಾವ ಕಾರ್ಯಕ್ರಮದ ಅನುದಾನವನ್ನು ಮರುಹೊಂದಾಣಿಕೆ ಮಾಡಿಕೊಳ್ಳಬೇಕೆಂಬುದರ ಬಗ್ಗೆ ಸ್ಪಷ್ಟ ಅಭಿಪ್ರಾಯ ಕೋರಿ ಶಿಕ್ಷಣ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2018-19ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ3552ರಡಿ ಮರು ಹೊಂದಾಣಿಕೆ ಮಾಡಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## 441. ವಿಷಯದ ಸಂಖ್ಯೆಃ ತೆಆಸ್ಥಾಸ/ 214 /2018-19

**ಸುಮೋಟೋ ನಿರ್ಣಯ: [SUO-MOTTO DECISION]**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-19ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ.3527 ಪುಟ ಸಂಖ್ಯೆ 131ರಲ್ಲಿ ವಾರ್ಡ್ 75ಕ್ಕೆ ರೂ.10.00 ಕೋಟಿ ಹಂಚಿಕೆ ಮಾಡಲಾಗಿದೆ. ಶ್ರೀ ಎಮ್.ಶಿವರಾಜ್, ಮಾಜಿ ಆಡಳಿತ ಪಕ್ಷದ ನಾಯಕರು ಮತ್ತು ವಾರ್ಡ್ ಸಂಖ್ಯೆ 75ರ ಸದಸ್ಯರುರವರು ಪತ್ರವನ್ನು ನೀಡಿ ಪಾಲಿಕೆ ವ್ಯಾಪ್ತಿಯ ವಾರ್ಡ್‌ಗಳ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಸದರಿಅನುದಾನವನ್ನು ಪತ್ರದಲ್ಲಿ ನಮೂದಿಸಿರುವಂತೆ ವಾರ್ಡ್‌ವಾರು ಮರು ಹಂಚಿಕೆ/ನಿಗಧಿ ಮಾಡಲುಕೋರಿರುತ್ತಾರೆ.

ಆದ್ದರಿಂದ, ಸದರಿ ಲೆಕ್ಕ ಶೀರ್ಷಿಕೆ 3527 ಪುಟ ಸಂಖ್ಯೆ 131 ರಲ್ಲಿರುವ ರೂ.10.00 ಕೋಟಿಅನುದಾನವನ್ನು, ತೆರಿಗೆ ಮತ್ತುಆರ್ಥಿಕ ಸ್ಥಾಯಿ ಸಮಿತಿಯು ಈ ಕೆಳಕಂಡ ವಾರ್ಡ್‌ಗಳಿಗೆ ಮರು ಹಂಚಿಕೆ ಮಾಡಿದ್ದು, ಅದರಂತೆಕಾಮಗಾರಿ ಸಂಖ್ಯೆ ನೀಡಲುಆಯುಕ್ತರು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.

| ಕ್ರ.ಸ. | ವಾರ್ಡ್ ಸಂಖ್ಯೆ | ಕಾಮಗಾರಿಗಳ ವಿವರಗಳು | ಮೊತ್ತ ರೂ.ಲಕ್ಷಗಳಲ್ಲಿ |
|---|---|---|---|
| 1 | 65 | Comprehensive Development works in ward No.65 | 50.00 |
| 2 | 68 | Horticulture works in ward No.68 | 100.00 |
| 3 | 72 | Comprehensive development works in ward No.72 | 150.00 |
| 4 | 73 | Horticulture works in ward No.73 | 100.00 |
| 5 | 125 | Comprehensive development works in ward No.125 | 450.00 |
| 6 | 149 | Drilling of bore wells, commissioning of new pipelines in ward No.149 | 100.00 |
| 7 | 196 | Comprehensive development works in ward No.196 | 50.00 |
| | | ಒಟ್ಟು ರೂ. | 1000.00 |

(ಎಸ್.ಪಿ. ಹೇಮಲತಾ)
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**